ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 10
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | July 2022 | Monthly**





## ಸ್ವಾತಂತ್ರ್ಯದ ಅಮೃತ ಮಹೋತ್ಸವ

ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಯ ಉನ್ನತಿಗಾಗಿ, ನಮ್ಮದೇ ಆದ ಜಾಗೃತಿಗಾಗಿ ಮತ್ತು ಇಂಡಿಯಾದಿಂದ ಭಾರತದೆಡೆಗೆ ಹೋಗಲು ಅಮೃತ ಮಹೋತ್ಸವವು ನಮ್ಮ ಅಸ್ಮಿತೆಯ ಹೆಮ್ಮೆಯನ್ನು ತಿಳಿಯುವ ಸಮಯವಾಗಿದೆ


A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

**ಆಗಸ್ಟ್ 1 ಮತ್ತು ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿಸುವುದು ಹೇಗೆ?**

**ಪ್ರೀತಿಯ ಓದುಗರಿಗೆ 75 ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು**

ಆತ್ಮೀಯ ಓದುಗರೆಲ್ಲರೂ ಶಿಕ್ಷಕರೇ ಆಗಿರುವುದರಿಂದ ಪ್ರತಿವರ್ಷವೂ ಸ್ವಾತಂತ್ರ್ಯೋತ್ಸವ ಆಚರಣೆ ಮಾಡುವುದು ನಮಗೆಲ್ಲಾ ಸಂತೋಷದ ವಿಷಯವೇ ಆಗಿರುತ್ತದೆ. ಆದರೆ ಈ ವರ್ಷ ಆ ಸಂತೋಷ ಇಮ್ಮಡಿಯಾಗಿದೆ ಏಕೆಂದರೆ ಈ ವರ್ಷ ನಾವೆಲ್ಲಾ ಆಚರಿಸುತ್ತಿರುವುದು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ. ಇಡೀ ದೇಶದಾದ್ಯಂತ ಎಲ್ಲಾ ಕ್ಷೇತ್ರಗಳಲ್ಲೂ ವಿಶಿಷ್ಟವಾಗಿ ಹೆಮ್ಮೆಯಿಂದ ಈ ಕಾರ್ಯಕ್ರಮವನ್ನು ಮಾಡುತ್ತಾರೆ. ವಿದ್ಯಾರ್ಥಿಗಳೊಂದಿಗಿರುವ ನಾವು ವಿಶಿಷ್ಟವಾಗಿ, ವಿಭಿನ್ನವಾಗಿ ವಿಜೃಂಭಣೆಯಿಂದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸಬೇಕಿದೆ.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘವೂ ಸಹ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ದೇಶದಾದ್ಯಂತ ಒಂದು ಲಕ್ಷ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ವಿಭಿನ್ನವಾಗಿ ಆಚರಿಸಲು ನಿರ್ಧರಿಸಿದೆ. ಆಗಸ್ಟ್ ಒಂದರಂದು ಬಾಲಗಂಗಾಧರ ತಿಲಕರ ಪುಣ್ಯದಿನವಾಗಿರುವುದರಿಂದ ಆ ದಿನವನ್ನು ಆಯ್ಕೆ ಮಾಡಿಕೊಂಡು ಭಾರತಮಾತೆಯ ಪೂಜೆ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಸನ್ಮಾನ ಕಾರ್ಯಕ್ರಮವನ್ನು ಒಂದು ಲಕ್ಷ ಶಾಲೆಗಳಲ್ಲಿ ಆಚರಿಸಲು ತೀರ್ಮಾನಿಸಿದೆ. ಈ ಕಾರ್ಯಕ್ರಮದ ವಿವರ ಪಡೆದುಕೊಂಡು ತಾವುಗಳೆಲ್ಲರೂ ಸಂಭ್ರಮದಿಂದ ಕಾರ್ಯಪ್ರವೃತ್ತರಾಗಿರುವುದು ಸಂತೋಷ ತಂದಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ರಾಜ್ಯದ 20000 ಸಾವಿರ ಶಾಲೆಗಳಲ್ಲಿ ಆಗಸ್ಟ್ ಒಂದರಂದು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಭಾರತಮಾತೆಯ ಪೂಜೆ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿದೆ. ಅಂದು ಸಂಘಟನೆಯಿಂದ ಪಡೆದ ಭಾರತಮಾತೆಯ ಭಾವಚಿತ್ರವನ್ನು ಶಾಲೆಯಿಂದ 300 ಮೀಟರ್ ಅಂತರದಿಂದ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಊರಿನ ಹಿರಿಯರು, ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸಂಘಟನೆಯ ಬ್ಯಾನರ್ ಹಿಡಿದು ಭಾರತಮಾತೆಯ ಭಾವಚಿತ್ರವನ್ನು ಮೆರವಣಿಗೆಯ ಮೂಲಕ ಶಾಲಾ ವೇದಿಕೆಗೆ ತರುವುದು. ನಂತರ ವೇದಿಕೆಯಲ್ಲಿ ಭಾರತಮಾತೆ ಮತ್ತು ತಾಯಿ ಸರಸ್ವತಿಗೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ, ಕಾರ್ಯಕ್ರಮಕ್ಕೆ ಬಂದಿರುವ ಅತಿಥಿಗಳನ್ನು ಸ್ವಾಗತ ಮಾಡಿ, ಸಂಘಟನೆಯ ಕಾರ್ಯ ವೈಖರಿಯನ್ನು ಪ್ರಾಸ್ತಾವಿಕ ನುಡಿಯಲ್ಲಿ ಹೇಳುವುದು. ನಂತರ ಉತ್ತಮ ಭಾಷಣಕಾರರಿಂದ ಸ್ವಾತಂತ್ರ್ಯದ ಮಹತ್ವವನ್ನು ಹೇಳಲು ತಿಳಿಸುವುದು. ನಂತರ ಅದೇ ಊರಿನ ಸ್ವಾತಂತ್ರ್ಯ ಹೋರಾಟಗಾರರು ಯಾರಾದರು ಇದ್ದಲ್ಲಿ ಅಥವಾ ಅವರ ಮನೆಯ ಪ್ರಮುಖರನ್ನು ಗೌರವಿಸುವುದು. ನಂತರ ಸಂಘಟನೆಯಿಂದ ಪಡೆದ ಭಾರತಮಾತೆಯ ಭಾವಚಿತ್ರವನ್ನು ಆ ಶಾಲೆಗೆ ಕೊಡುಗೆಯಾಗಿ ನೀಡಿ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸುವುದು.

**ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮ:** ಪ್ರತಿವರ್ಷ ಆಚರಣೆ ಮಾಡುವುದಕ್ಕಿಂತಲೂ ವಿಶೇಷವಾಗಿ ವಿಜೃಂಭಣೆಯಿಂದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಬೇಕು. ಈಗಿನಿಂದಲೇ ಶಾಲಾ ವಿದ್ಯಾರ್ಥಿಗಳಿಗೆ ಭಾಷಣ, ದೇಶಭಕ್ತಿಗೀತೆ, ಚರ್ಚಾಸ್ಪರ್ಧೆ, ವೇಷಭೂಷಣ ಸ್ಪರ್ಧೆಗಳನ್ನು ಆಯೋಜಿಸುವುದು. ಬಹುಮಾನ ಗಳಿಸಿದ ವಿದ್ಯಾರ್ಥಿಗಳಿಗೆ ಆಗಸ್ಟ್ 15ರಂದು ಬಹುಮಾನ ವಿತರಿಸುವುದು. ಆಗಸ್ಟ್ 15 ರಂದು ಕಾರ್ಯಕ್ರಮದಲ್ಲಿ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ ಬಗ್ಗೆ ಉತ್ತಮ ಶಿಕ್ಷಕರಿಂದ ಭಾಷಣ ಮಾಡಿಸುವುದು. ವಿದ್ಯಾರ್ಥಿಗಳನ್ನು ಸಹ ಅಂದು ಭಾಷಣ ಮಾಡಲು ತಯಾರು ಮಾಡುವುದು. ಈ ನಿಮಿತ್ತ ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತು ಸ್ವಾತಂತ್ರ್ಯ ಹೋರಾಟದ ಅನೇಕ ಘಟನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದಂತಾಗುತ್ತದೆ.

ಎಲ್ಲರೂ ಉತ್ಸಾಹದಿಂದ ಈ ಎರಡು ಕಾರ್ಯಕ್ರಮಗಳನ್ನು ಆಯೋಜಿಸಿ ಸಫಲರಾಗುತ್ತೀರಿ ಎನ್ನುವ ನಿರೀಕ್ಷೆಯಲ್ಲಿ.........

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜಿ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಸ್ವರಾಜ್ಯ ಸಂಗ್ರಾಮದಲ್ಲಿ ಸಾಹಿತ್ಯಾತ್ಮಕ ಹೋರಾಟ 3
- ದೇವಿ ಅಹಲ್ಯಾಬಾಯಿ ಹೋಳ್ಕರ್ 5
- ಸ್ವಾತಂತ್ರ್ಯದ ಅಮೃತ ಮಹೋತ್ಸವ 6
- ಅಭಿವ್ಯಕ್ತಿ ಸ್ವಾತಂತ್ರ್ಯ 7
- ಶಿಕ್ಷಕ ಸ್ನೇಹ ಸಮ್ಮಿಲನ 8
- ಗುರುವಂದನಾ ಕಾರ್ಯಕ್ರಮ 8
- ವಿದ್ಯಾರ್ಥಿ ಮಿತ್ರ 10
- ಸ್ವಾತಂತ್ರ್ಯದ ಅಮೃತ ಮಹೋತ್ಸವ – "ಇಂಡಿಯಾದಿಂದ ಭಾರತದೆಡೆಗೆ" 11
- ರಾಷ್ಟ್ರೀಯ ಕಾರ್ಯಕಾರಿಣಿ 12

# ಸ್ವರಾಜ್ಯ ಸಂಗ್ರಾಮದಲ್ಲಿ ಸಾಹಿತ್ಯಾತ್ಮಕ ಹೋರಾಟ

**ಶ್ರೀ ರಾಜೇಶ್ ಪದ್ಮಾರ್**
ಉಪನ್ಯಾಸಕರು,
ಸಾಮಾಜಿಕ ಕಾರ್ಯಕರ್ತರು
ಬೆಂಗಳೂರು



ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವೈಶಿಷ್ಟ್ಯವೆಂದರೆ ಸಾಹಿತ್ಯಾತ್ಮಕ ಹೋರಾಟ (Literary Movement). ಸ್ವಾತಂತ್ರ್ಯ ಸಂಗ್ರಾಮದ ಆಶಯಗಳಿಗೆ ಧ್ವನಿಯಾಗಿ ಸಾವಿರಾರು ಮಂದಿ ವಿಚಾರವಂತರು ಲೇಖನಗಳನ್ನು ಬರೆದರು. ಕವಿಗಳು ಕವಿತೆಗಳನ್ನು ಹೊಸೆದರು. ನೂರಾರು ಪತ್ರಿಕೆಗಳು, ಪುಸ್ತಕಗಳು ಪ್ರಕಟಿತವಾಯಿತು. ನೈಜ ಮಾಹಿತಿಗಳನ್ನು ಜನರ ಮುಂದಿಟ್ಟರು. ಯಾವ ಮಾಹಿತಿಗಳನ್ನು ಬ್ರಿಟೀಷರು ಸುಳ್ಳಾಗಿ ತಪ್ಪಾಗಿ ಬಿಂಬಿಸುತ್ತಿದ್ದರೋ ಅದಕ್ಕೆ ಪ್ರತಿಯಾಗಿ ಲೇಖನಗಳನ್ನು, ಕಥೆಗಳನ್ನು, ಕವನಗಳನ್ನು, ಸಾಹಿತ್ಯಗಳನ್ನು ನಿರ್ಮಾಣ ಮಾಡುತ್ತಾ ಹೋದರು. ವೈಚಾರಿಕ ಜಾಗೃತಿ ಮೂಡಿಬಂತು.

1882ರಲ್ಲಿ 'ಆನಂದ ಮಠ' ಎನ್ನುವ ಕಾದಂಬರಿಯ ಮುನ್ನುಡಿಯಲ್ಲೇ ಬಂಕಿಮಚಂದ್ರ ಚಟರ್ಜಿಯವರು 'ವಂದೇ ಮಾತರಂ' ಕವನವನ್ನು ಬರೆದರು. ದೇಶವನ್ನು ಮಾತೃಸ್ವರೂಪಿಯಾಗಿ ಕಲ್ಪನೆ ಮಾಡಿಕೊಂಡ ಕವಿ ಸಾಲುಗಳಲ್ಲಿ ಅದಕ್ಕೆ ಅಕ್ಷರ ರೂಪವನ್ನು ಕೊಟ್ಟರು. 'ವಂದೇ ಮಾತರಂ' – ಅರ್ಥಾತ್ ತಾಯೇ ವಂದಿಸುವೆ. ಪ್ರಾರಂಭದಲ್ಲಿ ಬಂಗಾಲದ ನೆಲದಲ್ಲಷ್ಟೇ ಮೊಳಗುತ್ತಿದ್ದ 'ವಂದೇ ಮಾತರಂ' ಹಾಡು, ನಂತರದ ದಿನಗಳಲ್ಲಿ ಇಡೀ ದೇಶದ ಉದ್ದಗಲಕ್ಕೂ ವ್ಯಾಪಿಸಿತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತಿನಿಂದ ಅರುಣಾಚಲ ಪ್ರದೇಶದವರೆಗೆ 'ವಂದೇ ಮಾತರಂ' ಒಂದು ರಣಮಂತ್ರವಾಗಿ ನಿನಾದಿಸಿತು. ವಿದೇಶದ ನೆಲದಲ್ಲು 'ವಂದೇ ಮಾತರಂ' ಮಾರ್ದನಿಸಿತು. ಲಂಡನ್, ಪ್ಯಾರಿಸ್, ಜರ್ಮನಿಯಲ್ಲಿ ಸೇರಿದಂತೆ ಹತ್ತಾರು ದೇಶಗಳಲ್ಲಿ ಎಲ್ಲೆಲ್ಲಾ ಭಾರತೀಯರು ಒಟ್ಟು ಸೇರುತ್ತಿದ್ದರೋ, ಅಲ್ಲೆಲ್ಲಾ 'ವಂದೇ ಮಾತರಂ' ಘೋಷಣೆ ಮೊಳಗುತ್ತಿತ್ತು. 'ವಂದೇ ಮಾತರಂ' ಶಬ್ದವನ್ನು ಕೇಳಿದ ತಕ್ಷಣ ಮೈಯಲ್ಲಿ ರೋಮಾಂಚನವಾಗುತ್ತಿತ್ತು. 'ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ, ಕಮಲಾಕಮಲದಲ ವಿಹಾರಿಣೀ' – ಈ ರೀತಿಯ ಭಾವನಾತ್ಮಕ ಸಾಲುಗಳು ಲಕ್ಷಾಂತರ ಯುವಕರಲ್ಲಿ ದೇಶಭಕ್ತಿಯನ್ನು ಉದ್ದೀಪಿಸಿತು.

ಸಾಹಿತ್ಯ ನಿರ್ಮಾಣ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಹೋಯಿತು. ರವೀಂದ್ರನಾಥ ಠ್ಯಾಗೋರ್ ಅನೇಕ ಕವಿತೆಗಳನ್ನು ಬರೆದರು. ಸಾಹಿತ್ಯದಲ್ಲಿ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸುವ ಕಾರ್ಯವನ್ನು ಮಾಡಿದರು.

1905ರಲ್ಲಿ ರವೀಂದ್ರನಾಥ ಠ್ಯಾಗೋರರ ಸಂಬಂಧಿ ಅಬನೀಂದ್ರನಾಥ ಠ್ಯಾಗೋರ್ ಅವರು ಭಾರತಮಾತೆಯ ಚಿತ್ರವನ್ನು ಸ್ವಾತಂತ್ರ್ಯ ಆಂದೋಲನದ ಹಿನ್ನೆಲೆಯಲ್ಲಿ ಬಿಡಿಸಿದರು. ಅದಾಗ ತಾನೇ ಜನಪ್ರಿಯಗೊಳ್ಳುತ್ತಿದ್ದ ಪ್ರಿಂಟಿಂಗ್ ಟೆಕ್ನಾಲಜಿಯ ಸದುಪಯೋಗ ಮಾಡಿದ್ದರಿಂದ ಭಾರತ ಮಾತೆಯ ಭಾವಚಿತ್ರ ಇಡೀ ಭಾರತದಲ್ಲಿ ವಿತರಣೆಯಾಯಿತು. ಭಾವನಾತ್ಮಕವಾಗಿ ಶಬ್ದಗಳಲ್ಲಿ ಮಾತ್ರ ಭಾರತಾಂಬೆಯನ್ನು ಕಾಣುತ್ತಿದ್ದ ಅನೇಕ ಮಂದಿಗೆ ಭಾರತಮಾತೆಯ ಚಿತ್ರದ ದರ್ಶನ ಪ್ರೇರಣೆ ನೀಡಿತು. ಮನಸ್ಸುಗಳು ಪುಳಕಗೊಂಡವು. ನೂರಾರು ಮಂದಿ ಸೇರುವ ಜಾಗಗಳಲ್ಲಿ ಭಾರತ ಮಾತೆಯ ಚಿತ್ರಕ್ಕೆ ಹೂವಿನ ಅರ್ಚನೆ ನಡೆಯುತ್ತಿತ್ತು.

ಹೀಗೆ ಸಾಹಿತಿಗಳು ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆಸಿದರು. ಎಲ್ಲಾ ಭಾಷೆಗಳಲ್ಲಿಯೂ ರಾಷ್ಟ್ರೀಯ ಭಾವೈಕ್ಯ ಸಾರುವ ಸಾಹಿತ್ಯ ರಚನೆಯಾಗುತ್ತಿತ್ತು.

ಕರ್ನಾಟಕದ ನೆಲದಲ್ಲೂ ಈ ರೀತಿಯ ಸಾಹಿತ್ಯ ನಾಡಿನುದ್ದಕ್ಕೂ ಮೊಳಗಿ ಬಂತು. ಕನ್ನಡದ ಮೊದಲ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಹೇಳಿದರು. "ಭಾರತಾಂಬೆಯ ಶಕ್ತಿ ನನಗಾತ್ಮ ಶಕ್ತಿ". ನನಗೆ ಆತ್ಮಶಕ್ತಿ ಕೊಡುತ್ತಿರುವಂತಹದ್ದು ಭಾರತಾಂಬೆಯ ಕುರಿತು ಇರುವಂತಹ ನನ್ನ ಭಕ್ತಿ. ಈ ಸಾಲುಗಳು ಕರಾವಳಿಯುದ್ದಕ್ಕೂ ಯುವಕರಿಗೆ ಪ್ರೇರಣೆಯ ಸ್ರೋತವಾಯಿತು. ಗಡಿನಾಡು ಕಾಸರಗೋಡಿನ ಕಯ್ಯಾರ ಕಿಞ್ಞಣ್ಣ ರೈಗಳು ತಾರುಣ್ಯದ ಹೊಸ್ತಿಲಲ್ಲಿದ್ದ ಯುವ ಕವಿ. ಇಡೀ ದೇಶ ಒಂದಾಗಬೇಕೆಂಬ ಆಶಯದಲ್ಲಿ ಕವನಗಳನ್ನು ಬರೆದರು. ಅವರ ಕವನ ಸಂಕಲನ 'ಐಕ್ಯಗಾನ'ದಲ್ಲಿನ ಒಂದು ಹಾಡು 'ಐಕ್ಯವೊಂದೇ ಮಂತ್ರ ಐಕ್ಯದಿಂದಲೇ ಸ್ವತಂತ್ರ, ಐಕ್ಯಗಾನದಿ ರಾಷ್ಟ್ರ ತೇಲುತಿರಲಿ'. ಅವರ ಮತ್ತೊಂದು ಕವನದಲ್ಲಿ ಭಾವನಾತ್ಮಕ ಸಾಲುಗಳನ್ನು ಬರೆಯುತ್ತಾರೆ. ದೇಶ ವಿಭಜನೆಯ ಚರ್ಚೆ ನಡೆದು ಕೊನೆಗೆ ಸ್ವಾತಂತ್ರ ಪ್ರಾಪ್ತಿಯ ಜೊತೆಜೊತೆಗೆ ದೇಶ ವಿಭಜನೆಯಾದುದರ ಕುರಿತು ಪದ್ಯ ಬರೆದರು. "ಎನ್ನೆದೆಯ ಬಿಸಿ ರಕ್ತ ಕುದಿ ಕುದಿಸಿ ಮಸಿ ಮಾಡಿ ನಾನ್ ಬರೆಯಬಲ್ಲೆನೇ ನಾನು ಕವಿಯು!". ಸಮಾಜದ ಪರಿಸ್ಥಿತಿಗಳನ್ನು ಕಂಡು ಅವುಗಳನ್ನು ತಿದ್ದಲು ಮೊನಚಾದ ಲೇಖನಿ ಬೇಕು, ತಿವಿಯೋ ಲೇಖನಿ ಬೇಕು, ಬಲಿತವಾದ ಲೇಖನಿ ಬೇಕು, ಮುದಿತ ಲೇಖನಿ ಬೇಕು, ಆ ಲೇಖನಿಗೆ ಮಸಿ ಬೇಕು. ಆ ಮಸಿಯೇ ನನ್ನೆದೆಯ ರಕ್ತ ಎಂದು ಅಂದು ಕಯ್ಯಾರರು ಬರೆದ ಕವನ ಇಂದಿಗೂ ಪ್ರೇರಣಾದಾಯಿ.

ರಾಷ್ಟ್ರಕವಿ ಕುವೆಂಪು ಯೌವ್ವನದಲ್ಲಿದ್ದ ದಿನಗಳದು. ಕುವೆಂಪುರವರ ಎಲ್ಲಾ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಕಂಪನ್ನು ಕಾಣಬಹುದು. ಅವರ ಮೇಲೆ ಸ್ವಾಮಿ ವಿವೇಕಾನಂದರ ವಿಚಾರಗಳು ಪ್ರಭಾವ ಬೀರಿತ್ತು. ನೂರಾರು ಕವಿತೆಗಳನ್ನು, ನೂರಾರು ವಿಚಾರಗಳನ್ನು ಕಾವ್ಯ ರೂಪಕ್ಕಿಳಿಸಿದವರು ಕುವೆಂಪು. ಅವರ ಎಲ್ಲಾ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಅಭಿವ್ಯಕ್ತಿಯನ್ನು ನಾವು ಕಾಣಬಹುದು. ನಂತರ ಬರೆದ ನಮ್ಮ ನಾಡಗೀತೆಯಲ್ಲಿಯೂ "ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ" ಎಂದಾಗ ಭಾರತವನ್ನು ಮಾತೃಸ್ವರೂಪದಲ್ಲಿ ನೋಡುವ ನಮ್ಮ ನೆಲದ ಮೂಲಗುಣವನ್ನು ಕಾಣಬಹುದು. ಭಾರತವನ್ನು 'ಜನನಿ' ಎಂದರು. ಜನನಿ ಎಂದರೆ 'ಮಾತೆ' ಎಂದರ್ಥ. ಭಾರತವನ್ನು ಮಾತೃಸ್ವರೂಪಿಯಾಗಿ ಹಾಗೂ ಆಕೆಯ ಮಗಳಾದ ಕರ್ನಾಟಕವನ್ನೂ ಮಾತೆ ಎಂದರು. ನಾಡಿನುದ್ದಕ್ಕೂ ಹರಡಿರುವ ಸಾಂಸ್ಕೃತಿಕ ಆಶಯಗಳಿಗೆ ಶಬ್ದರೂಪ ನೀಡಿದರು. ಪ್ರತಿಹಾಡಿನಲ್ಲಿ ರಾಷ್ಟ್ರೀಯ ಭಾವೈಕ್ಯತೆ ವ್ಯಕ್ತವಾಗುತ್ತಿತ್ತು.

ಪುಟ 4 ಕ್ಕೆ ➤

➤ ಪುಟ 3 ರಿಂದ.....

ಸ್ವಾತಂತ್ರ್ಯ ಸಂಗ್ರಾಮದ ವೇಳೆ ನೂರಾರು ಪತ್ರಿಕೆಗಳು ಪ್ರಾರಂಭವಾಯಿತು. ಸಾವಿರಾರು ಲೇಖಕರು ಹುಟ್ಟಿಕೊಂಡರು. ಅನೇಕ ಪತ್ರಿಕೆಗಳು ಜನಪ್ರಿಯವಾಗುತ್ತಿತ್ತು. ಬ್ರಿಟಿಷರು ಹೇಳುತ್ತಿದ್ದ, ಬರೆಯುತ್ತಿದ್ದ ಸುಳ್ಳುಗಳನ್ನು ಧಿಕ್ಕರಿಸಿ ಭಾರತೀಯ ಪತ್ರಿಕೆಗಳು ಮೊನಚಾದ ಭಾಷೆಯಲ್ಲಿ ಮಾರುತ್ತರವನ್ನು ನೀಡುತ್ತಿತ್ತು. 1826ರಲ್ಲಿ 'ಉದ್ದಂಡ ಮಾರ್ತಂಡ' ಎನ್ನುವ ಮೊಟ್ಟ ಮೊದಲ ಭಾರತೀಯ ಹಿಂದೀ ಪತ್ರಿಕೆಯನ್ನು ಪಂಡಿತ್ ಜುಗಲ್ ಕಿಶೋರ್ ಶುಕ್ಲ ಪ್ರಾರಂಭಿಸಿದರು. 1851ರಲ್ಲಿ ದಾದಾಭಾಯಿ ನವರೋಜಿ 'ರಸ್ತ್ ಗೊಫ್ತಾರ್' ಎಂಬ ಗುಜರಾತಿ ಪತ್ರಿಕೆಯನ್ನು ಪ್ರಾರಂಭಿಸಿದರು. 1853ರಲ್ಲಿ ಗಿರೀಶ್ ಚಂದ್ರ ಘೋಷ್ ಅವರು ಹಿಂದೂ ಪೇಟ್ರಿಯಟ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಬಂಗಾಲದಲ್ಲಿ 1868ರಲ್ಲಿ ಸಿಸಿರ್ ಕುಮಾರ್ ಘೋಷ್ ಮತ್ತು ಮೋತಿಲಾಲ್ ಘೋಷ್ ಪ್ರಾರಂಭಿಸಿದ 'ಅಮೃತ್ ಬಜಾರ್ ಪತ್ರಿಕಾ' ಮುಖ್ಯವಾಹಿನಿಯನ್ನು ಪ್ರಭಾವಿಸಿದ ಪತ್ರಿಕೆಯಾಯಿತು. 1873ರಲ್ಲಿ ಬಂಕಿಮಚಂದ್ರ ಚಟರ್ಜಿ ಬಂಗದರ್ಶನ ಪತ್ರಿಕೆಯನ್ನು ಪ್ರಾರಂಭಿಸಿದರು. 1878ರಲ್ಲಿ ಮದರಾಸಿನಲ್ಲಿ ಜಿ.ಎಸ್. ಅಯ್ಯರ್, ವೀರರಾಘವಾಚಾರಿ ಮತ್ತು ಶುಭಾ ರಾವ್ ಪಂಡಿತ್ 'ದಿ ಹಿಂದು' ವಾರಪತ್ರಿಕೆಯನ್ನು ಪ್ರಾರಂಭಿಸಿದರು, ಕ್ರಮೇಣ ಅದು ದಿನಪತ್ರಿಕೆಯಾಗಿ ಪರಿವರ್ತಿತವಾಯಿತು. 1886ರಲ್ಲಿ ಲೋಕಮಾನ್ಯ ತಿಲಕರು 'ಕೇಸರಿ' ಎಂಬ ಮರಾಠಿ ದೈನಿಕ ಮತ್ತು 'ಮರಾಠ' ಎಂಬ ಆಂಗ್ಲ ವಾರಪತ್ರಿಕೆಗಳನ್ನು ಪ್ರಾರಂಭಿಸಿದರು. 1906ರಲ್ಲಿ ಬಾರೀಂದ್ರ ಕುಮಾರ್ ಘೋಷ್ ಮತ್ತು ಭೂಪೇಂದ್ರ ದತ್ತ 'ಯುಗಾಂತರ್' ಪತ್ರಿಕೆಯನ್ನು ಬಂಗಾಲದಲ್ಲಿ ಪ್ರಾರಂಭಿಸಿದರು. ಲಂಡನ್‌ನಲ್ಲಿ ಶ್ಯಾಮ್‌ಜೀ ಕೃಷ್ಣವರ್ಮ 'ದಿ ಇಂಡಿಯನ್ ಸೋಷಿಯೋಲೊಜಿಸ್ಟ್' ಪತ್ರಿಕೆಯ ಮೂಲಕ ಭಾರತೀಯ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ವಿಚಾರಗಳ ಕುರಿತು ಜಾಗೃತಿ ಮೂಡಿಸುತ್ತಿದ್ದರು. ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಮೇಡಂ ಭೀಕಾಜಿ ಕಾಮಾ 'ಬಂದೇ ಮಾತರಂ' ಪತ್ರಿಕೆಯನ್ನು ಪ್ರಾರಂಭಿಸಿದರು. ವೀರೇಂದ್ರನಾಥ್ ಚಟ್ಟೋಪಾಧ್ಯಾಯ ಜರ್ಮನಿಯ ಬರ್ಲಿನ್‌ನಲ್ಲಿ 'ತಲವಾರ್' ಪತ್ರಿಕೆಯನ್ನು ಪ್ರಾರಂಭಿಸಿದರು. 1911ರಲ್ಲಿ ಗೋಪಾಲಕೃಷ್ಣ ಗೋಖಲೆಯವರು 'ದಿ ಹಿತವಾದ' ಆಂಗ್ಲಪತ್ರಿಕೆಯನ್ನು ಪ್ರಾರಂಭಿಸಿದರು. 1913ರಲ್ಲಿ ಫಿರೋಜ್ ಷಾಹ್ ಮೆಹ್ತಾ 'ಬಾಂಬೇ ಕ್ರಾನಿಕಲ್' ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಮದನ್ ಮೋಹನ್ ಮಾಳವೀಯ 'ಲೀಡರ್' ಎಂಬ ಆಂಗ್ಲ ಪತ್ರಿಕೆಯನ್ನು ಪ್ರಾರಂಭಿಸಿದರು. 1924ರಲ್ಲಿ ಸುಂದರ್ ಸಿಂಗ್ ಲ್ಯಾಲ್‌ಪುರಿ 'ಹಿಂದುಸ್ತಾನ್ ಟೈಮ್ಸ್' ಆಂಗ್ಲಪತ್ರಿಕೆಯನ್ನು ಪ್ರಾರಂಭಿಸಿದರು. ಇದರಲ್ಲಿ ಪ್ರಕಟವಾದ ಭಗತ್ ಸಿಂಗ್ ರಾಜ್‌ಗುರು, ಸುಖದೇವ್ ಕುರಿತ ಮುಖಪುಟದ ಸತತ ಲೇಖನಗಳು ದೇಶಾದ್ಯಂತ ಸಂಚಲನ ಮೂಡಿಸಿದ್ದುವು. ಬಾಬಾ ಸಾಹೇಬ್ ಅಂಬೇಡ್ಕರರು 1920ರಲ್ಲಿ ಪ್ರಾರಂಭಿಸಿದ 'ಮೂಕನಾಯಕ' ಪತ್ರಿಕೆಯ ಮೂಲಕ ಹಾಗೂ 1927ರಲ್ಲಿ 'ಬಹಿಷ್ಕೃತ ಭಾರತ' ಪತ್ರಿಕೆಯ ಮೂಲಕ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು. ಮಹಾತ್ಮಾ ಗಾಂಧಿ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಯನ್ನು ಪ್ರಾರಂಭಿಸಿದರು. ಬಂಗಾಲದಲ್ಲಿ ಸಚೇಂದ್ರನಾಥ ಸಾನ್ಯಾಲ್ 'ಬಂಧಿ ಜೀವನ್' ಪತ್ರಿಕೆಯನ್ನು ಪ್ರಾರಂಭಿಸಿದರು. 1938ರಲ್ಲಿ ಜವಹರಲಾಲ್ ನೆಹರೂ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯನ್ನು ಪ್ರಾರಂಭಿಸಿದರು. ಕ್ರಾಂತಿಕಾರಿ ಗಣೇಶ್ ಶಂಕರ್ ವಿದ್ಯಾರ್ಥಿ 'ಪ್ರತಾಪ್' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು.

ಕರ್ನಾಟಕದಲ್ಲಿ 1842ರಲ್ಲಿ 'ಮಂಗಳೂರ ಸಮಾಚಾರ' ಎಂಬ ಕನ್ನಡದ ಮೊಟ್ಟಮೊದಲ ಪತ್ರಿಕೆ ರಾಷ್ಟ್ರೀಯತೆಯ ವಿಚಾರಗಳನ್ನು ಪ್ರಕಟಿಸುತ್ತಿತ್ತು. ತಿರುಮಲೆ ತಾತಾಚಾರ್ಯ ಶರ್ಮ, ಡಿ.ವಿ. ಗುಂಡಪ್ಪನವರು, ಎಂ. ವೆಂಕಟಕೃಷ್ಣಯ್ಯ ಸೇರಿದಂತೆ ಅನೇಕ ಮಹನೀಯರು ರಾಷ್ಟ್ರೀಯ ವಿಚಾರಗಳನ್ನು ಸಮಾಜ ಜೀವನದ ಮುನ್ನೆಲೆಗೆ ತಂದರು. ಕನ್ನಡ ಪತ್ರಿಕೋದ್ಯಮದ ಪ್ರಾರಂಭದ ದಿನಗಳಲ್ಲೇ ಎಲ್ಲಾ ಪತ್ರಿಕೆಗಳು, ಅದರಲ್ಲಿ ಮೂಡಿಬರುವ ಲೇಖನಗಳು ಭಾರತದ ಏಕತೆ, ಅಖಂಡತೆಯ ಕುರಿತು ಜಾಗೃತಿ ಮೂಡಿಸುವುದನ್ನೇ ಆದ್ಯತೆಯನ್ನಾಗಿರಿಸಿತ್ತು.

1885ರಲ್ಲಿ 'ವೃತ್ತಾಂತ ಚಿಂತಾಮಣಿ' ಪತ್ರಿಕೆಯನ್ನು ಎಂ. ವೆಂಕಟಕೃಷ್ಣಯ್ಯನವರು ಪ್ರಾರಂಭಿಸಿದರು. 1895ರಲ್ಲಿ 'ನಡೆಗನ್ನಡಿ', 1909ರಲ್ಲಿ 'ಸಾಧ್ವಿ', 1913ರಲ್ಲಿ 'ಮೈಸೂರು ಪೇಟ್ರಿಯಟ್ಸ್' ಪತ್ರಿಕೆಗಳು ಪ್ರಕಟಗೊಂಡವು. 1888ರಲ್ಲಿ ಬಿ. ನರಸಿಂಗರಾರಯರು 'ಸೂರ್ಯೋದಯ ಪ್ರಕಾಶಿಕಾ', 1894ರಲ್ಲಿ ಬಿ. ಶ್ರೀನಿವಾಸ ಅಯ್ಯಂಗಾರರಿಂದ 'ದೇಶಾಭಿಮಾನಿ', 1895ರಲ್ಲಿ ಮಣ್ಣೂರು ಗುಂಡೇರಾಯರಿಂದ 'ಕರ್ನಾಟಕ ವೈಭವ' ಪತ್ರಿಕೆಗಳು ಸ್ಥಾಪಿತವಾಯಿತು. 1896ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ 'ವಾಗ್ಭೂಷಣ' ಪತ್ರಿಕೆ ಪ್ರಕಟಿತವಾಯಿತು. 1906ರಲ್ಲಿ ಹರ್ಡೇಕರ್ ಮಂಜಪ್ಪನವರು 'ಧನುರ್ಧಾರಿ', 1907ರಲ್ಲಿ ವಿ.ಎಸ್. ಕಾಮತರು 'ಸ್ವದೇಶಾಭಿಮಾನಿ' ಪತ್ರಿಕೆಗಳನ್ನು ಪ್ರಾರಂಭಿಸಿದರು. 1907ರಲ್ಲಿ ಡಿ.ವಿ. ಗುಂಡಪ್ಪನವರು 'ಸಮಾಚಾರ ಸಂಗ್ರಹ' ಮತ್ತು 1913ರಲ್ಲಿ 'ಕರ್ನಾಟಕ' ಪತ್ರಿಕೆಯನ್ನು ಪ್ರಾರಂಭಿಸಿದರು. 1921ರಲ್ಲಿ ತಿರುಮಲೆ ತಾತಾಚಾರ್ಯ ಶರ್ಮರು 'ವಿಶ್ವಕರ್ನಾಟಕ' ಪತ್ರಿಕೆಯನ್ನು ಪ್ರಾರಂಭಿಸಿದರು. ಅದೇ ವರ್ಷ 1921ರಲ್ಲಿ ಕೊಡಗಿನ ಪಂದ್ಯದ ಬೆಳ್ಯಪ್ಪರ 'ಕೊಡಗು' ಪತ್ರಿಕೆ ಪ್ರಾರಂಭವಾಯಿತು. 1922ರಲ್ಲಿ ಆಲೂರು ವೆಂಕಟರಾಯರು 'ಜಯಕರ್ನಾಟಕ', 1926ರಲ್ಲಿ ಪಿ.ಆರ್. ರಾಮಯ್ಯನವರು 'ತಾಯಿನಾಡು', 1931ರಲ್ಲಿ 'ಪ್ರಜಾಮತ', 1934ರಲ್ಲಿ 'ಜನವಾಣಿ' ಪತ್ರಿಕೆಗಳನ್ನು ಪ್ರಾರಂಭಿಸಿದರು. 1921ರಲ್ಲಿ 'ಕರ್ಮವೀರ', 1929ರಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಗಳು ಪ್ರಾರಂಭವಾಯಿತು. 1928ರಲ್ಲಿ ಕಡೆಂಗೋಡ್ಲು ಶಂಕರಭಟ್ಟರು 'ರಾಷ್ಟ್ರಬಂಧು' ಪತ್ರಿಕೆಯನ್ನು ಪ್ರಾರಂಭಿಸಿದರು. ಕರಾವಳಿಯ ಉಡುಪಿಯಲ್ಲಿ 'ನವಯುಗ' ಹಾಗೂ 'ಸತ್ಯಾಗ್ರಹ' ಪತ್ರಿಕೆ ಪ್ರಕಟವಾಗುತ್ತಿತ್ತು. ಬಳ್ಳಾರಿಯಲ್ಲಿ 'ಕರ್ನಾಟಕ ಕೇಸರಿ', ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ 'ಕಾನರಾವೃತ್ತ', ಹುಬ್ಬಳ್ಳಿಯಲ್ಲಿ 'ತರುಣ ಕರ್ನಾಟಕ', ಬಾಗಲಕೋಟೆಯಲ್ಲಿ 'ಕನ್ನಡಿಗ' ಎಂಬ ಪತ್ರಿಕೆಗಳು ಪ್ರಕಟವಾಗುತ್ತಿತ್ತು. ಬಿಜಾಪುರದಲ್ಲಿ 'ಕರ್ನಾಟಕ ವೈಭವ', ಬೆಂಗಳೂರಿನಲ್ಲಿ 'ಚಿತ್ರಗುಪ್ತ' ಪತ್ರಿಕೆಗಳು ಪ್ರಕಟವಾಗುತ್ತಿತ್ತು. ಗಾಂಧೀಜಿಯವರು ಪ್ರಾರಂಭಿಸಿದ್ದ 'ಹರಿಜನ' ಪತ್ರಿಕೆಯ ಕನ್ನಡ ಆವೃತ್ತಿ ಪತ್ರಿಕೆಯು 'ಹರಿಜನ' ಹೆಸರಿನಲ್ಲೇ ಪ್ರಕಟವಾಗುತ್ತಿತ್ತು. ಸಿದ್ದವನಹಳ್ಳಿ ಕೃಷ್ಣಶರ್ಮರು ಅದರ ಕನ್ನಡ ಆವೃತ್ತಿಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಲೋಕಮಾನ್ಯ ತಿಲಕರು ಪ್ರಾರಂಭಿಸಿದ್ದ ಕೇಸರಿ ಪತ್ರಿಕೆಯ ಕನ್ನಡ ಮಾದರಿಯ ಪತ್ರಿಕೆಗಳಾದ 'ಕನ್ನಡ ಕೇಸರಿ', 'ತಿಲಕ ಸಂದೇಶ', 'ವೀರಕೇಸರಿ', 'ಧನುರ್ಧಾರಿ' ಇತ್ಯಾದಿ ಪತ್ರಿಕೆಗಳು ತಿಲಕರ ಆಶಯ ಲೇಖನಗಳನ್ನು ಕನ್ನಡದಲ್ಲಿ ಪ್ರಕಟಿಸುತ್ತಿತ್ತು.

ಬಹುತೇಕ ಸ್ವಾತಂತ್ರ್ಯ ಹೋರಾಟಗಾರರು ಸ್ವತಃ ಪತ್ರಕರ್ತರಾಗಿ ಕಾರ್ಯ ನಿರ್ವಹಿಸಿದ್ದರು ಹಾಗೂ ಜನಜಾಗೃತಿಗಾಗಿ ಪತ್ರಿಕೆ–ಮಾಧ್ಯಮಗಳು ಮಹತ್ವದ ಪಾತ್ರವನ್ನು ನಿರ್ವಹಿಸಿತ್ತು. ●

# ದೇವಿ ಅಹಲ್ಯಾಬಾಯಿ ಹೋಳ್ಕರ್

ಶ್ರೀಮತಿ ವರಲಕ್ಷ್ಮಿ
ಕಛೇರಿ ಕಾರ್ಯದರ್ಶಿ
ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ



ಭಾರತದ ಇತಿಹಾಸದ ದೇದೀಪ್ಯಮಾನ ನಾರೀರತ್ನಗಳಲ್ಲಿ ದಿವ್ಯವೂ, ಅಮೂಲ್ಯವೂ ಆದ ರತ್ನವೆಂದರೆ ದೇವಿ ಅಹಲ್ಯಾಬಾಯಿ– ವ್ಯಕ್ತಿತ್ವದಲ್ಲಿ ಸಾಗರದ ಗಾಂಭೀರ್ಯ, ಸೂರ್ಯನ ತೇಜಸ್ಸು, ಪ್ರಖರತೆ, ಚಂದ್ರನ ಶೀತಲತೆ ಹಾಗೂ ಭೂಮಿತಾಯಿಯ ಸಹನಶೀಲತೆಗಳೆಲ್ಲವೂ ಒಳಗೊಂಡಿದ್ದವು ಎಂದರೆ ತಪ್ಪಲ್ಲ. ಲೋಕಕಲ್ಯಾಣಕಾರಿ, ಅಖಿಲ ಭಾರತೀಯ ವ್ಯಕ್ತಿತ್ವಕ್ಕೆ ಹೆಸರಾದ ಅಹಲ್ಯಾಬಾಯಿಯವರ ಬಗ್ಗೆ ಬರೆಯಲು ಸಾಗರದಷ್ಟಿದೆ. ತನ್ನ ನಾಡಿಗಾಗಿ ತನ್ನ ನೋವನ್ನೆಲ್ಲಾ ಮರೆತು ತನ್ನ ಜೀವತ ಅವಧಿಯವರೆಗೂ ನಿರಂತರ ಪ್ರಜೆಗಳ ಸೇವೆಯಲ್ಲಿ ಜೀವನ ತೇಯ್ದುವವರು ಅಹಲ್ಯಾಬಾಯಿಯವರು. ಪ್ರಜೆಗಳು ಸಹ ಇವರನ್ನು ದೈವೀ ಸ್ವರೂಪಳೆಂದು ನಂಬಿಕೆ, ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು.

ಇವರ ಜನ್ಮವು ಮಹಾರಾಷ್ಟ್ರದ ಈಗಿನ ಅಹಮದ ನಗರ ಜಿಲ್ಲೆಯ ಜಾಮಖೇಡ ತಾಲೂಕಿನ ಚೌಂಡಿ ಹೆಸರಿನ ಹಳ್ಳಿಯಲ್ಲಿ 1725ರಲ್ಲಿ ಆಯಿತು. ತಂದೆ ತಾಯಿಯರಿಂದ ಉನ್ನತ ಸಾಂಸ್ಕೃತಿಕ ಶಿಕ್ಷಣ ಪಡೆದ ಈಕೆ ಅಸಾಮಾನ್ಯ ಕರ್ತೃತ್ವವನ್ನು ಪ್ರಕಟ ಪಡಿಸಿದಳು. ಮಾಣಕೋಜಿ ಶಿಂಧೆಯವರ ಮಗಳಾದ ಅಹಲ್ಯೆಯು ಗುಣದಿಂದ, ಬುದ್ಧಿವಂತಿಕೆಯಿಂದ ಬೆಳೆದು 12 ವರ್ಷದವಳಾದಳು. ಸಹಜವಾಗಿ ತಂದೆ ತಾಯಿಯರಿಗೆ, ತಮ್ಮ ಮಗಳಿಗೆ ಯೋಗ್ಯ ವರನನ್ನು ಹುಡುಕುವ ಚಿಂತೆ ಪ್ರಾರಂಭವಾಯಿತು. ಒಂದು ಸಲ ಪೇಶ್ವೆ ಮಹಾರಾಜರು ಮಾಲವದ ಮೂಲಕ ಪುಣೆಯ ಕಡೆಗೆ ಹೋಗುವಾಗ ಆಕಸ್ಮಾತ್ ಚೌಂಡಿ ಗ್ರಾಮದಲ್ಲಿ ತಂಗುವ ಪ್ರಮೇಯ ಉಂಟಾಯಿತು. ಪ್ರಾತಃಕಾಲದಲ್ಲಿ ಅಲ್ಲೇ ಅಡ್ಡಾಡುತ್ತಾ ಹೋಗುತ್ತಿದ್ದಾಗ ಸಮೀಪದ ಶಿವನ ಪೂಜೆಯಲ್ಲಿ ಮಗ್ನಳಾಗಿದ್ದ ಬಾಲಕಿಯೋರ್ವಳನ್ನು ಕಂಡರು. ಆಕೆಯ ಮುಖದಲ್ಲಿ ಏನೋ ಅಸಾಮಾನ್ಯ ರೂಪವನ್ನು ಕಂಡ ಮಹಾರಾಜರು ಜೊತೆಗೆ ಬಂದಿದ್ದ ಮಲ್ಹಾರರಾವರೊಡನೆ "ನಿಮ್ಮ ಮಗ ಖಂಡೇರಾವನಿಗೆ ಮದುವೆ ಮಾಡಿಸಿದರೆ ನಿಮ್ಮ ಕುಲದ ಹೆಸರು ಉಜ್ವಲಗೊಳ್ಳುವುದು" ಎಂದರು. ಮಲ್ಹಾರರಾವರಿಗೂ ಇದು ಸರಿ ಎನಿಸಿತು.

ಮದುವೆ ಪ್ರಸ್ತಾಪ ನಡೆಯಿತು. ವೈಭವ ಸಂಪನ್ನವಾದ ಹೋಲ್ಕರ್ ಮನೆತನಕ್ಕೆ ಗುಣಸಂಪನ್ನೆಯಾದ ಅಹಲ್ಯಾಬಾಯಿಯವರು ಪಾದಾರ್ಪಣೆಯನ್ನೂ ಮಾಡಿದರು. ತನ್ನ ಪತಿಯಲ್ಲಿ ವೀರತ್ವ, ಪರಾಕ್ರಮವನ್ನು ನಿರೀಕ್ಷಿಸಿದ್ದ ಅಹಲ್ಯಾಬಾಯಿಯವರಿಗೆ ಪತಿಯ ವಿಲಾಸಲೋಲುಪತೆಯ ಅರಿವಾಯಿತು. ಆಕೆಯ ಮನದಲ್ಲಿದ್ದ ಕಲ್ಪನೆಗಳು ಚೂರು ಚೂರಾದವು. ತನ್ನ ಸತೀತ್ವದ ಬಲದಿಂದ ಪತಿಯ ಸ್ವಭಾವ ಬದಲಿಸಲು ಪ್ರಯತ್ನಿಸಿ ನಿರಾಶೆಗೊಂಡಳು. ಒಬ್ಬ ಮಗ ಮಾಲೇರಾವನನ್ನು ಮತ್ತು ಮುಕ್ತಾಬಾಯಿ ಎನ್ನುವ ಸುಪುತ್ರಿಯನ್ನೂ ಪಡೆದರು. ಒಂದು ಕಡೆ ಖಂಡೇರಾವ್‌ರ ರಂಗು ರಂಗಿನ ಜೀವನ ಮುಂದುವರೆಯುತ್ತಿದ್ದಂತೆ ಅಹಲ್ಯಾಬಾಯಿಯವರು ತನ್ನ ಮಕ್ಕಳನ್ನು ಬೆಳೆಸುತ್ತಾ ಪ್ರೀತಿಯ ಮಾವ ಮಲ್ಹಾರರಾವರ ಜೊತೆಯಲ್ಲಿ ರಾಜ್ಯಾಡಳಿತದ ಒಳಹೊರಗನ್ನು ಅರಿಯಲು ಪ್ರಯತ್ನಿಸಿದರು. ಮಗನ ವರ್ತನೆಯ ಬಗ್ಗೆ ಮಲ್ಹಾರರಾವರಿಗೆ ಪೂರ್ಣ ತಿಳಿದಿತ್ತು. ಅವರಿಗೆ ತನ್ನ ಮಗನಿಗಿಂತ ಸೊಸೆಯ ಮೇಲೆ ಹೆಚ್ಚು ಪ್ರೀತಿ ಇದ್ದಿತು. ಅಹಲ್ಯಾಬಾಯಿ ಯವರಿಗೂ ಅಷ್ಟೆ ತಾನು ಖಂಡೇರಾವರ ಪತ್ನಿಯೆಂದು ಕರೆಸಿಕೊಳ್ಳುವುದಕ್ಕಿಂತ ಸುಭೇದಾರ ಮಲ್ಹಾರರಾವರ ಸೊಸೆ ಎನಿಸಿಕೊಳ್ಳಲು ಇಷ್ಟವಾಗುತ್ತಿತ್ತು.

14–3–1754ರಂದು ಅಹಲ್ಯಾರವರ ಜೀವನವೇ ಅಂಧಕಾರ ಮಯವಾಯಿತು. ಕುಂಭೇರಿ ಯುದ್ಧದಲ್ಲಿ ತನ್ನ ಪತಿ ಮೃತ್ಯುವಶರಾದರು. ಪತಿಯ ಅಕಾಲಮರಣದಿಂದ ಅಹಲ್ಯಾಬಾಯಿ ಯವರು 'ಸತಿ' ಯಾಗಲು ನಿಶ್ಚಯಿಸಿದರು. ಆದರೆ ತನ್ನ ಮಾವ ಮಲ್ಹಾರರಾವ್‌ರವರ ಒತ್ತಾಯಕ್ಕೆ ಕಟ್ಟುಬಿದ್ದು ಪ್ರಜೆಗಳ ಮಾತೆಯಾಗಲು ಒಪ್ಪಿದರು. ಇದರಿಂದಾಗಿ ಅವರ ಜೀವನದಲ್ಲಿ ಹಾಗೂ ಹೋಲ್ಕರ್ ಸಂಸ್ಥಾನದಲ್ಲಿ ಒಂದು ಬೇರೆ ರೀತಿಯ ತಿರುವು ಉಂಟಾಯಿತು.

ಪತಿಯ ಮರಣಕ್ಕೆ ಇತರ ಸರದಾರರು ಶೋಕ ವ್ಯಕ್ತಪಡಿಸಿದರು. ಮೊಗಲ್ ಬಾದಶಹನು ಕೂಡಾ ಖಂಡೇರಾವರ ಮಗ ಮಾಲೇರಾವನಿಗೆ ಅಂಬಡ ಪರಗಣ ಹಾಗೂ ಅಹಲ್ಯಾಬಾಯಿಯವರಿಗೆ ವೇರೂಲ್ ಪರಗಣವನ್ನು ಇತ್ತು ತನ್ನ ಸಂವೇದನೆಯನ್ನು ವ್ಯಕ್ತಪಡಿಸಿದನು.

ಮಲ್ಹಾರರಾವರು ತನ್ನ ವಿಶಾಲ ಸಂಸ್ಥಾನದ ಆಡಳಿತ ವ್ಯವಸ್ಥೆಗಳ ಪಾಠಗಳನ್ನು ಸೊಸೆಗೆ ಹೇಳಿಕೊಡಲು ಪ್ರಾರಂಭಿಸಿದರು. ದೇವಿಯವರು ಅಷ್ಟೇ ಶೀಘ್ರವಾಗಿ ಗ್ರಹಿಸಿದರು. 1761ರ ಪಾಣಿಪತ್ ಯುದ್ಧದಲ್ಲಿ ಹಿಂದೂ ಸರದಾರರಿಗೆ ಸೋಲಾಯಿತು. ತಾವು ಕಳೆದುಕೊಂಡಂತಹ ಪ್ರತಿಷ್ಠೆಯನ್ನು ಪುನಃ ಪಡೆಯಲು ಅಹಲ್ಯಾಬಾಯಿಯವರು ಪಣತೊಟ್ಟರು. ತನ್ನ ಮಾವನ ಸಲಹೆಯಂತೆ ಗೋಹಾಡ ಕೋಟೆಗೆ ಮುತ್ತಿಗೆ ಹಾಕಿ ಜಯಶೀಲರಾದರು. ಅಲ್ಲಿಯವರೆಗೆ ಜನರಿಗೆ ಇವರ ಧಾರ್ಮಿಕತೆಯ ಅರಿವಿತ್ತು ಆದರೆ ಈಗ ಅವರ ವೀರತ್ವವನ್ನೂ ನೋಡುವಂತಾಯಿತು.

ಆದರೆ ಆದರ್ಶಪ್ರಾಯರಾಗಿ ತಂದೆ ಸ್ಥಾನದಲ್ಲಿ ನಿಂತು ಮಾರ್ಗದರ್ಶಕರಾಗಿದ್ದ ಇವರ ಮಾವ ಸ್ವರ್ಗಸ್ಥರಾದಾಗ, ರಾಜ್ಯ ಶಾಸನದ ಸಂಪೂರ್ಣ ಜವಾಬ್ದಾರಿಯು ಅಹಲ್ಯಾಬಾಯಿಯವರದಾಯಿತು. ತನ್ನ ಪುತ್ರ ಅವರ ಅಜ್ಜನಂತೆ ರಾಜನೀತಿ ನಿಪುಣನಾಗಿರಲಿಲ್ಲ. ಇದರಿಂದ ಅವನು ರಾಜನಾದರೂ ಪ್ರಜೆಗಳ ದೃಷ್ಟಿಯಲ್ಲಿ ದಕ್ಷನೆನಿಸಿಕೊಳ್ಳಲಿಲ್ಲ. ಮಗ ಯಾವಾಗಲೂ ಆಗಾಗ ಬೇಟೆ, ವಿಹಾರಗಳಲ್ಲಿ ಮಗ್ನನಾಗಿರುತ್ತಿದ್ದ. ಇವನ ವರ್ತನೆ ತಾಯಿಗೆ ನುಂಗಲಾರದ ಬಿಸಿತುಪ್ಪದಂತಿತ್ತು. ಒಂದು ದರ್ಜಿಯ ವರ್ತನೆಯಿಂದ ಕ್ರೋಧಿತನಾದ ಮಾಲೇರಾವನು ಅವನ ಹತ್ಯೆಯನ್ನು ಮಾಡಿಬಿಟ್ಟ. ಇಂತಹ ದುರ್ವರ್ತನೆಯಿಂದ ರೋಸಿಹೋದ ಅಹಲ್ಯಾಬಾಯಿಯವರು ಅವನಿಗೆ ಶಿಕ್ಷಿಸಿ ಬಂಧನದಲ್ಲಿ ಇರಿಸಿದರು. ಅಲ್ಲೇ ಅವನ ದೇಹಾಂತ್ಯವಾಯಿತು. ತನಗೆ ಎಷ್ಟು ನೋವಾಗುತ್ತಿದ್ದರೂ ಪ್ರಜೆಗಳ ಸೇವೆಯಲ್ಲಿ ಎಳ್ಳಷ್ಟೂ ಲೋಪವಾಗದಂತೆ ನಡೆದುಕೊಳ್ಳುತ್ತಿದ್ದರು.

**ದೇವಿ ಅಹಲ್ಯಾಬಾಯಿ – ಶ್ರೇಷ್ಠ ಆಡಳಿತಗಾರಳು**

ರಾಜ್ಯ ಸಂಚಾಲನೆ ಮತ್ತು ರಾಜ್ಯ ತಂತ್ರಗಳನ್ನು ಮನಃಪೂರ್ವಕವಾಗಿ ಮಾಡುತ್ತಿದ್ದ ದೇವಿಯವರು ತನ್ನ ಗುಣ ವಿಶೇಷತೆಯಿಂದ ಮತ್ತು ಚಾತುರ್ಯದಿಂದ ಎಲ್ಲರ ಮನದಲ್ಲೂ ಆದರದ ಸ್ಥಾನವನ್ನು ಪಡೆದರು. ಅನೇಕರು ಅವರ ವ್ಯಕ್ತಿಗತ ಸಮಸ್ಯೆಗಳಿಗೂ ಕೂಡ ಇವರ ಮಾರ್ಗದರ್ಶನವನ್ನು ಪಡೆಯಲು ಉತ್ಸುಕರಾಗಿದ್ದರು.

ಅತ್ಯಂತ ಕಡಿಮೆ ಸೈನ್ಯದಿಂದ ಅತ್ಯಧಿಕ ಯಶಸ್ಸು ಎಂಬ ಮಾವನವರ ಸೂತ್ರವನ್ನು ಅಹಲ್ಯಾಬಾಯಿಯವರು ಅನುಸರಿಸಿದರು. ಆರ್ಥಿಕ ವ್ಯವಹಾರದಲ್ಲಿ ಅತಿ ದಕ್ಷತೆ ಹಾಗೂ ಸಾರ್ವಜನಿಕ ಹಣ ಯೋಗ್ಯ ಉಪಯೋಗಕ್ಕೆ ಬಳಸುತ್ತಿದ್ದರು. ರಾಜಕೋಶದಲ್ಲಿರುವ ಹಣ ಪ್ರಜೆಗಳ ಪರಿಶ್ರಮದ್ದು, ಅದು ಪ್ರಜೆಗಳಿಗಾಗಿಯೇ ಇರಬೇಕು ಎನ್ನುತ್ತಿದ್ದರು ಮತ್ತು ಹಾಗೆಯೇ ನಡೆದುಕೊಂಡರು. ಪ್ರತಿದಿನ ರಾಜಕೋಶದ ಹಾಗೂ ಇತರೆ ಲೆಕ್ಕಗಳನ್ನು

ಪುಟ 9 ಕ್ಕೆ ➢

# ಸ್ವಾತಂತ್ರ್ಯದ ಅಮೃತ ಮಹೋತ್ಸವ

ಆಗಸ್ಟ್ 1. 2022ಕ್ಕೆ ಒಂದು ಲಕ್ಷಕ್ಕಿಂತ ಅಧಿಕ ಶಾಲೆಗಳಲ್ಲಿ ಅಮೃತ ಮಹೋತ್ಸವವನ್ನು ಆಯೋಜಿಸುವುದು.

ಈ ವರ್ಷ ನಮ್ಮ ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದೆ ಎಂಬುದು ಅತ್ಯಂತ ಸಂತೋಷದ ವಿಷಯ. ನಾವೆಲ್ಲರೂ ಸೇರಿ ಆಗಸ್ಟ್ ಒಂದರಂದು ಭಾರತಮಾತೆಯ ಪೂಜೆ ಮತ್ತು ಸ್ವಾತಂತ್ರ್ಯ ಸೇನಾನಿ/ಸೈನಿಕ ಪರಿವಾರದವರ ಸನ್ಮಾನದ ಕಾರ್ಯಕ್ರಮವನ್ನು ಒಂದು ಲಕ್ಷಕ್ಕಿಂತ ಹೆಚ್ಚು ವಿದ್ಯಾಲಯಗಳಲ್ಲಿ ಹಮ್ಮಿಕೊಳ್ಳುವುದೆಂದು ನಿಶ್ಚಯಿಸಿದ್ದೇವೆ. ವಿಶೇಷವೇನೆಂದರೆ ಒಂದೇ ದಿನದಲ್ಲಿ ಎಲ್ಲಾ ಕಡೆ ಈ ಕಾರ್ಯಕ್ರಮವನ್ನು ಆಯೋಜಿಸುವುದು.

**ಕಾರ್ಯಕ್ರಮದ ಉದ್ದೇಶ:**

1. ಅಮೃತ ಮಹೋತ್ಸವದ ಕಾರ್ಯಕ್ರಮವನ್ನು ಮಾಡುವುದು ಸಂತೋಷ ಮತ್ತು ಗೌರವದ ಸಂದರ್ಭವಾಗಿದೆ.
2. ಸ್ವಾತಂತ್ರ್ಯ ಸೇನಾನಿ/ಸೈನಿಕರ ಪ್ರತಿ ಕೃತಜ್ಞತೆಯನ್ನು ಪ್ರಕಟ ಮಾಡುವುದು ಮತ್ತು ಹೊಸ ಪೀಳಿಗೆಗೆ ಸ್ವಾತಂತ್ರದ ಅಖಂಡತೆಯನ್ನು ಹಿಡಿಯಲು ಪ್ರೇರಣೆಯನ್ನು ನೀಡುವುದು.
3. ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯ ವಿಸ್ತಾರ ಮತ್ತು ಸದೃಢೀಕರಣಕ್ಕಾಗಿ ಒಂದು ಪ್ರಯತ್ನ.

**ಕಾರ್ಯಕ್ರಮದ ಸ್ವರೂಪ:** ವಿದ್ಯಾಲಯದ ಪ್ರಾಚಾರ್ಯರೊಂದಿಗೆ ಮಾತಾನಾಡಿ ಕಾರ್ಯಕ್ರಮವನ್ನು ನಿಶ್ಚಯ ಮಾಡುವುದು, ಶಿಕ್ಷಕರು, ವಿದ್ಯಾರ್ಥಿಗಳು ಮತು ಸಮಾಜದ ಜನರು ಸೇರಿ ವಿದ್ಯಾಲಯದ ಹತ್ತಿರದ ಊರಿನ ಮಧ್ಯಭಾಗದಿಂದ ಮೆರವಣಿಗೆ ಹೊರಟು ವಿದ್ಯಾಲಯವನ್ನು ತಲುಪುವುದು, ಗಣ್ಯವ್ಯಕ್ತಿಗಳಿಂದ ಭಾರತಮಾತೆಯ ಪೂಜೆ ಮಾಡಿಸುವುದು, ದೇಶಭಕ್ತಿ ಗೀತೆ, ಘೋಷಣೆಗಳು, ಸಾಧ್ಯವಾದರೆ ಸ್ವಾತಂತ್ರ್ಯ ಸೇನಾನಿಗಳ ಪರಿವಾರದ ಸದಸ್ಯರನ್ನು ಕರೆದು ಸನ್ಮಾನ ಮಾಡುವುದು ಮತ್ತು ಊರಿನ ಸೈನಿಕರ ಪರಿವಾರದವರನ್ನು ಕರೆದು ಸನ್ಮಾನ ಮಾಡುವುದು, ಭಾಷಣಕಾರರಿಂದ ಭಾಷಣ ಮಾಡಿಸುವುದು, ಅತಿಥಿಗಳು ಮತ್ತು ವಿದ್ಯಾರ್ಥಿಗಳಿಗೆ ಉಪಾಹಾರ ನೀಡುವುದು. ಸ್ಥಳೀಯ ಅನುಕೂಲಕ್ಕೆ ತಕ್ಕಂತೆ ಕಾರ್ಯಕ್ರಮದಲ್ಲಿ ಇನ್ನೂ ವಿಶೇಷತೆಗಳನ್ನು ಸೇರಿಸಬಹುದು. ವಿದ್ಯಾಲಯದ ಹೊರಗೆ ಬ್ಯಾನರ್, ಹೋರ್ಡಿಂಗ್ಸ್ ಮುಂತಾದುವನ್ನು ಹಾಕುವುದು.

**ಕಾರ್ಯಕ್ರಮದ ತಯಾರಿ:** ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ನಮ್ಮ ಕಾರ್ಯಪದ್ಧತಿಯ ಪ್ರಕಾರ ಪೂರ್ವ ತಯಾರಿ ಮತ್ತು ಪೂರ್ಣ ನಿಯೋಜನೆಯನ್ನು ಮಾಡಿಕೊಳ್ಳಬೇಕು. ಆದ್ದರಿಂದ ರಾಜ್ಯಮಟ್ಟದಿಂದ ಹಿಡಿದು ಹೋಬಳಿ ಹಂತದವರೆಗೆ ತಂಡದ ರಚನೆ ಮಾಡಬೇಕು. ವಿದ್ಯಾಲಯದವರೆಗೆ ಸಮಯಕ್ಕೆ ತಕ್ಕಂತೆ ನಿಯೋಜನೆ ಮಾಡಿಕೊಳ್ಳಬೇಕು.

ರಾಜ್ಯ ಮಟ್ಟದ ಸಮಿತಿಯನ್ನು ಏಪ್ರಿಲ್ 15 ರವರೆಗೆ ಮಾಡಿ ಸಭೆಯನ್ನು ಮಾಡಿರಬಹುದು. ಈ ಸಮಿತಿಯಲ್ಲಿ ಜಿಲ್ಲೆ/ತಾಲ್ಲೂಕಿನ ಪ್ರಮುಖರ ನೇಮಕವಾಗಿರಬಹುದು (ಎಲ್ಲಿ ಆಗಿಲ್ಲವೋ ಅಲ್ಲಿ ಆದಷ್ಟು ಬೇಗ ಸಮಿತಿಯ ರಚನೆ ಮಾಡಬೇಕು)

**ರಾಜ್ಯ ಮಟ್ಟದ ಸಮಿತಿಯವರು ಮಾಡಬೇಕಾದ ಕಾರ್ಯಗಳು:**

1. ಪ್ರತಿ ಜಿಲ್ಲೆಂಯು ವಿದ್ಯಾಲಯಗಳ ಸಂಖ್ಯೆಯನ್ನು ನಿಶ್ಚಯಿಸುವುದು.
2. ರಾಜ್ಯ ಹಂತದಿಂದ ಕಳುಹಿಸುವ ಸಾಹಿತ್ಯ/ಸಾಮಗ್ರಿ ಮತ್ತು ಜಿಲ್ಲಾ ಹಂತದಲ್ಲಿ ಆಗುವ ಮುದ್ರಣಗಳು, ಭಾರತಮಾತೆಯ ಭಾವಚಿತ್ರ, ಸ್ಟಿಕರ್, ಮೆರವಣಿಗೆ ಮುಂತಾದವುಗಳ ಬಗ್ಗೆ ನಿರ್ಣಯ ಮಾಡಿಕೊಳ್ಳುವುದು.
3. ವಿಭಿನ್ನ ಸಮಿತಿಗಳನ್ನು ರಚಿಸುವುದು. ಉದಾ: ಮಾಧ್ಯಮ, ತರಬೇತಿ, ಹಣಕಾಸು ಸಂಗ್ರಹ, ವಿತರಣೆ, ಮುದ್ರಣ ಇತ್ಯಾದಿ
4. ರಾಜ್ಯದಲ್ಲಿ ನಿತ್ಯ ಪ್ರವಾಸ, ಸಂಪರ್ಕ, ವರದಿ ತರಿಸಿಕೊಳ್ಳುವುದು, ಕೆಳಹಂತದಿಂದ ಪ್ರತಿ ರಾತ್ರಿ ರಾಜ್ಯ ಹಂತಕ್ಕೆ ವರದಿಯನ್ನು ತರಿಸಿಕೊಳ್ಳುವುದು.
5. ಸಮಿತಿಯ ಸದಸ್ಯರ ಹೆಸರು, ದಾಯಿತ್ವ, ಸಂಪರ್ಕ ಮಾಡಲು ದೂರವಾಣಿ ಸಂಖ್ಯೆ, ಈಮೇಲ್ ನ್ನು ತಕ್ಷಣ ಕೇಂದ್ರದ ಕಾರ್ಯಾಲಯಕ್ಕೆ ಕಳುಹಿಸುವುದು.

**ಜಿಲ್ಲಾ ಸಮಿತಿಯವರು ಮಾಡಬೇಕಾದ ಕಾರ್ಯಗಳು:**

1. ಜಿಲ್ಲಾ ಸಮಿತಿಯನ್ನು ಮಾಡುವುದು ಅದರಲ್ಲಿ ತಾಲ್ಲೂಕು/ಹೋಬಳಿ ಸಂಯೋಜಕರು ಪ್ರಮುಖ ಸದಸ್ಯರಾಗಿರುತ್ತಾರೆ.
2. ಪ್ರತಿಯೊಂದು ತಾಲ್ಲೂಕುಗಳಲ್ಲಿನ ವಿದ್ಯಾಲಯಗಳ ಸಂಖ್ಯೆಯನ್ನು ನಿಶ್ಚಯಿಸುವುದು.
3. ಜಿಲ್ಲಾ ಸಮಿತಿಯ ಸದಸ್ಯರ ಹೆಸರು, ವಿಳಾಸವನ್ನು ರಾಜ್ಯದ ಕೇಂದ್ರ ಕಛೇರಿಗೆ ಕಳುಹಿಸುವುದು.
4. ನಿಯಮಿತ ಪ್ರವಾಸ ಮತ್ತು ಸಂಪರ್ಕದ ಯೋಜನೆಯನ್ನು ಮಾಡಿಕೊಳ್ಳುವುದು.

ಶಿಕ್ಷಕ ಸಮಾಚಾರ ತಮ್ಮ ಕೈ ಸೇರುವ ಹೊತ್ತಿಗೆ ಆಗಸ್ಟ್ ಒಂದರ ಭಾರತಮಾತೆಯ ಪೂಜೆಯ ಕಾರ್ಯಕ್ರಮವೂ ಒಂದು ಪೂರ್ಣ ಯೋಜನೆಯಾಗಿ ರೂಪುಗೊಂಡಿರುತ್ತದೆ. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇಡೀ ದೇಶದಲ್ಲಿ ಒಂದು ಲಕ್ಷ ಶಾಲೆಗಳನ್ನು ಈ ಕಾರ್ಯಕ್ರಮದ ಮೂಲಕ ತಲುಪುವ ಕನಸನ್ನು ತಾವೆಲ್ಲಾ ಸಾಕಾರಗೊಳಿಸುತ್ತೀರಿ ಮತ್ತು ಈ ಕಾರ್ಯವು ಹೆಚ್ಚು ಯಶಸ್ಸನ್ನು ಕಾಣಲೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಆಯೋಜನ ಸಮಿತಿಯು ಆಶಿಸುತ್ತದೆ.

●

# ಅಭಿವ್ಯಕ್ತಿ ಸ್ವಾತಂತ್ರ್ಯ

**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**



'ಸ್ವಾತಂತ್ರ್ಯ' ಎಂಬ ಶಬ್ದಕ್ಕೆ ಅರ್ಥ–ಬಿಡುಗಡೆ ಹೊಂದಿರುವುದು, ಪರಾಧೀನರಾಗಿಲ್ಲದಿರುವುದು, ಸ್ವಂತ ಇಚ್ಛೆಯಂತೆ ನಡೆಯುವುದು ಎಂಬೆಲ್ಲ ಅರ್ಥಗಳಿವೆ.

'ಸ್ವಚ್ಛಂದತೆ' ಎಂಬ ಶಬ್ದಕ್ಕೆ ಅರ್ಥ– ಮನ ಬಂದಂತೆ ವರ್ತಿಸುವಿಕೆ, ಸ್ವೇಚ್ಛಾವರ್ತನೆ–ಅಂಕೆಯಿಲ್ಲದ ನಡವಳಿಕೆ. ಬೇಜವಾಬ್ದಾರಿಯ ವರ್ತನೆ ಎಂಬ ಅರ್ಥಗಳು ಬರುತ್ತವೆ.

ಇದು ನಮ್ಮ ಸ್ವಾತಂತ್ರ್ಯೋತ್ಸವದ 75 ನೇ ವರ್ಷ. ಅಮೃತೋತ್ಸವದ ಸಂಭ್ರಮವನ್ನು ಅನುಭವಿಸುತ್ತಿರುವ ವರ್ಷ. ದೇಶವನ್ನು ಸ್ವತಂತ್ರಗೊಳಿಸಿಕೊಂಡು ನಮ್ಮದೇ ಸಂವಿಧಾನವನ್ನು ರೂಪಿಸಿಕೊಂಡು ನಮ್ಮಲ್ಲಿನ ವಿವಿಧ ಮತ, ಧರ್ಮ, ಸಂಪ್ರದಾಯಗಳಿಗೆ ಅನುಗುಣವಾಗಿ ಆಡಳಿತ ನಡೆಸಲಾಗುತ್ತಿದೆ, ನಿಜ. ಇದೇನೂ ಸುಲಲಿತವಾದ ಕಾರ್ಯವೇನಲ್ಲ. ಆದರೆ ಈ ಸವಾಲನ್ನು ಯಶಸ್ವಿಯಾಗಿ ಎದುರಿಸುತ್ತ, ಅನೇಕ ಏಳುಬೀಳುಗಳನ್ನೂ ಕಾಣುತ್ತ ದೇಶವನ್ನು ಜಾಗತಿಕ ನೆಲೆಯಲ್ಲಿ ಮುಂಚೂಣಿಯಲ್ಲಿ ನಿಲ್ಲಿಸಿಕೊಂಡ ಹಿರಿಮೆ ಸಾಧನೆ ನಮ್ಮದಾಗಿದೆ. ಸ್ವತಂತ್ರ ದೇಶದ ಪ್ರಜೆಗಳಾಗಿ, ನಾಗರಿಕರಾಗಿ ದೇಶದ ಈ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬರ ಕರ್ತವ್ಯ ಗಣನೀಯ ವಾದುದು. ಅಂತೆಯೇ ರಾಷ್ಟ್ರಭಕ್ತಿಯೊಂದಿಗೆ ದೇಶದ ಸಮಗ್ರತೆಯನ್ನು ಕಾಪಾಡಿಕೊಳ್ಳುವ ಕರ್ತವ್ಯ, ಜವಾಬ್ದಾರಿ ಕೂಡ ಎಲ್ಲರದೂ ಆಗಿರುತ್ತದೆ.

ಈ ಸಮಗ್ರತೆಯನ್ನು ಉಳಿಸಿಕೊಳ್ಳುವುದಾದರೂ ಹೇಗೆ? ನೂರಮೂವತ್ತು ಕೋಟಿ ಜನರ ಆಲೋಚನೆ, ವಿಚಾರಗಳಲ್ಲಿ ಸಾಮ್ಯತೆ ಬರಲು ಸಾಧ್ಯವೆ? ಭಿನ್ನಾಭಿಪ್ರಾಯ ಇರುವುದು ಸಹಜವೇ ತಾನೆ?

ಪರಸ್ಪರ ಅಭಿಪ್ರಾಯಗಳ ವಿನಿಮಯ, ವಿಶ್ಲೇಷಣೆ ಇಲ್ಲದೆ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಇಲ್ಲಿ ಬರುತ್ತದೆ 'ಅಭಿವ್ಯಕ್ತಿ' ಎಂಬ ಸಾಧನ. ಈ ಅಭಿವ್ಯಕ್ತಿಯ ಎರಡು ಮುಖಗಳೇ ವಾಚಾ ಮತ್ತು ಲಿಖಿತ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮಾತು ಮತ್ತು ಬರಹ. ಒಮ್ಮೆ ವ್ಯಕ್ತವಾದೊಡನೆಯೇ 'ಬರಹ'ವೆಂಬುದು ದಾಖಲೆಯಾಗಿಬಿಡುತ್ತದೆ. ಆದರೆ ಮಾತು ಹಾಗಲ್ಲ, ಅದನ್ನು ಕ್ಷಣಕ್ಷಣಕ್ಕೂ ಬದಲಾಯಿಸಿಬಿಡಬಹುದು. ಆದರೆ ಅದು ಉಂಟುಮಾಡುವ ಪರಿಣಾಮವಿದೆಯಲ್ಲ, ಅದು ಬಹಳ ಶಕ್ತಿಯುತವಾದದ್ದು. ಅದಕ್ಕೇ ಹಿರಿಯರು ಹೇಳುವುದು ನಾವಾಡುವ ಮಾತಿನ ಮೇಲೆ ಎಚ್ಚರ ವಿರಬೇಕೆಂದು.

**ನುಡಿದರೆ ಮುತ್ತಿನ ಹಾರದಂತಿರಬೇಕು।**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು।**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು।**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು॥**

ಎಂದಿದ್ದಾರೆ ಬಸವಣ್ಣನವರು. ನಮ್ಮ ಮಾತಿನ ಅಭಿವ್ಯಕ್ತಿಯು ಇತರರಿಗೆ ಒಳಿತನ್ನುಂಟುಮಾಡುವಂತಿರಬೇಕಲ್ಲದೆ ಯಾವುದೇ ರೀತಿಯಲ್ಲಿಯೂ ಹಾನಿಯನ್ನುಂಟುಮಾಡುವಂತಿರಬಾರದಂತೆ. ಅದಕ್ಕೇ ಹರಿದಾಸರು 'ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಿಗೆ' ಎಂದಿದ್ದಾರೆ. ನಮ್ಮ ವಾಕ್ಯೋಕ್ತಿಯಲ್ಲಿನ ಶಬ್ದಸಂಪತ್ತು ಅನವಶ್ಯಕವಾಗಿ ಬಳಕೆಯಾಗಬಾರದಂತೆ. ನಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೇರುವಂತೆಯೂ ಇರಬಾರದಂತೆ. ಅಷ್ಟೇ ಅಲ್ಲ, ಬೇರೆಯವರ ವಿಚಾರಗಳಾಗಲೀ, ಕಾರ್ಯಚಟುವಟಿಕೆಗಳಾಗಲೀ ನಮಗೆ ಹಿಡಿಸದಿದ್ದಲ್ಲಿ ಅದನ್ನು ಕುರಿತು ಜರಿಯುವ, ನಿಂದಿಸುವ, ಅಪಹಾಸ್ಯ ಮಾಡುವ ಮಾತುಗಳು ನಮ್ಮಿಂದ ಬರಬಾರದಂತೆ. ಒಂದೊಮ್ಮೆ ಅವರ ವಿಚಾರಗಳಲ್ಲಿ ದೋಷವೇನಾದರೂ ಇದ್ದಲ್ಲಿ ಕೂಡ ಅದನ್ನು ನಯವಾದ ನುಡಿಗಳಿಂದಲೇ ಅದನ್ನು ತೋರಿಸಿಕೊಡಬೇಕಲ್ಲದೆ ನಾವು ಹೇಳುವುದೇ ಸರಿಯೆಂದು ಅಹಂಭಾವದಿಂದ ತಿಳಿಸಬಾರದು. ಅಂದರೆ ನಮಗೆ ಇರುವ ವಾಕ್‌ಸ್ವಾತಂತ್ರ್ಯವು ಸ್ವಚ್ಛಂದತೆಯತ್ತ ಹೊರಳಲು ನಾವು ಆಸ್ಪದ ಕೊಡಬಾರದು. ಇದನ್ನೇ ಕವಿವಾಣಿಯಲ್ಲಿ 'ಮಾತಿಗೊಂದು ಅರ್ಥ ಬೇಕೆ' ಅರ್ಥವಿದ್ದರಷ್ಟೆ ಸಾಕೆ?? ಎಂದಿದೆ.

ಈ ಎಲ್ಲ ಹಿನ್ನೆಲೆಯೊಂದಿಗೆ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಯೋಚಿಸಬೇಕಾಗಿದೆ. ಸಂಘಜೀವಿಯಾಗಿರುವ ಮಾನವನ ಪ್ರತಿಯೊಂದು ನಡೆನುಡಿಯೂ ಸಮಾಜದ ಆರೋಗ್ಯಕರ ಬೆಳವಣಿಗೆಯತ್ತ ಕಾಳಜಿ ಹೊಂದಿರಬೇಕಾದುದು ಅವಶ್ಯವಾಗಿರುತ್ತದೆ. ಅದಿಲ್ಲವಾದಲ್ಲಿ ಸಮಾಜದ ಸ್ವಾಸ್ಥ್ಯವು ಕೆಡುವ ಸಂಭವವಿರುತ್ತದೆ. ಅಧಿಕಾರದ (ರಾಜಕೀಯವೂ ಸೇರಿದಂತೆ), ಶ್ರೀಮಂತಿಕೆಯ, ವಿದ್ವತ್ತಿನ, ಸಮಾಜದಲ್ಲಿನ ಗಣ್ಯಸ್ಥಾನದ ಬಲದಿಂದ ಯಾರೇ ಆದರೂ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ಮಾಡುವುದು ಸರ್ವಥಾ ಸರಿಯಲ್ಲ. ಇದರಿಂದ ಉಂಟಾಗುವ ಅಶಾಂತಿಯು ವೈಯಕ್ತಿಕ ಪರಿಸರದಿಂದ ಹಿಡಿದು ದೇಶವ್ಯಾಪೀ ಹರಡುವ ಸಾಧ್ಯತೆಗಳಿರುತ್ತವೆ. ಇಂತಹ ಅನೇಕ ಉದಾಹರಣೆಗಳನ್ನು ಈಗಾಗಲೇ ನಾವು ನೋಡಿದ್ದೇವೆ, ನೋಡುತ್ತಿದ್ದೇವೆ. ಕೆಲವು ಪಟ್ಟಭದ್ರಹಿತಾಸಕ್ತಿಗಳು ತಮ್ಮ 'ಅಹಂ'ಗೆ ಆದ್ಯತೆ ಕೊಡುತ್ತ ಸಮಾಜದ ಶಾಂತಿಯನ್ನು ಕದಡುವಂತಹ ಪ್ರಚೋದನಕಾರೀ ನುಡಿಗಳನ್ನು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಹೆಸರಿನಲ್ಲಿ ಆಡುತ್ತ ಸುದ್ದಿ ಮಾಡುತ್ತಿರುವುದು ಎಲ್ಲರಿಗೂ ತಿಳಿದದ್ದೇ ಆಗಿದೆ. ಬುದ್ಧಿಜೀವಿಗಳೆಂಬ ಭ್ರಮೆಯ ಅಲೆಯಲ್ಲಿ ತೇಲಾಡುತ್ತ ಇತರರ ಭಾವನೆಗಳಿಗೆ ಹಾನಿಯನ್ನುಂಟು ಮಾಡುತ್ತಿರುವವರ ನಡವಳಿಕೆಯನ್ನೂ ನೋಡುತ್ತಲೇ ಇದ್ದೀವಿ. ನಮ್ಮ ಜಾತ್ಯತೀತ ರಾಷ್ಟ್ರದಲ್ಲಿ ಮತ್ತೊಬ್ಬರ ಧಾರ್ಮಿಕ ಭಾವನೆಗಳಿಗೆ ಹಾನಿ ಮಾಡುವ, ಪಕ್ಷಪಾತ ಧೋರಣೆ ತೋರುವ ಸಂಕುಚಿತ ಮನೋಭಾವವನ್ನೂ ಕಾಣುತ್ತಿದ್ದೇವೆ. ಕಲೆಯ ಹೆಸರಿನಲ್ಲಿ ಬೇರೆಯವರ ಧಾರ್ಮಿಕ ನಂಬಿಕೆಗಳನ್ನು ಕುರಿತು ಅತ್ಯಂತ ಕೀಳುಮಟ್ಟದ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದನ್ನೂ ಕಂಡಿದ್ದೇವೆ. ಇದೆಲ್ಲವೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುತ್ತಿರುವ ಅನಾಚಾರಗಳು. ಇಂತಹ ನಡವಳಿಕೆಗಳನ್ನು ಖಂಡಿಸುವ ದಿಟ್ಟತನವೂ ನಮ್ಮಲ್ಲಿ ಬರಬೇಕು. ಸ್ವತಂತ್ರ ದೇಶವೊಂದು ತನ್ನ ಸ್ವಾತಂತ್ರ್ಯವನ್ನು ಆರೋಗ್ಯಕರವಾಗಿ ಉಳಿಸಿಕೊಂಡು, ಯಾವುದೇ ಕ್ಷೇತ್ರದಲ್ಲಿಯೂ ಸ್ವಚ್ಛಂದತೆಯ ಚಟುವಟಿಕೆಗಳಿಗೆ ಅವಕಾಶ ನೀಡದೆ ಸೂಕ್ತ ಮಾರ್ಗದರ್ಶನ ಮಾಡುತ್ತ ಪ್ರಗತಿಯದಾರಿಯಲ್ಲಿ ಸಾಗುವುದು ಉತ್ತಮ ಭವಿಷ್ಯಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಅಭಿವ್ಯಕ್ತಿಯೆಂಬುದು ಸಾಮರಸ್ಯದ ಬದುಕಿಗೆ ಸಾಧನವಾಗಬೇಕಲ್ಲದೆ ಕೆಲವರ ಪ್ರತಿಷ್ಠೆಯ ಚಟುವಟಿಕೆಗಳಾಗಬಾರದು. ಸ್ವಾತಂತ್ರ್ಯೋತ್ಸವದ ಅಮೃತವರ್ಷದಲ್ಲಿ ಈ ಎಲ್ಲ ಸ್ವಾತಂತ್ರ್ಯಗಳನ್ನು ಎಚ್ಚರಿಕೆಯೊಂದಿಗೆ ರಕ್ಷಿಸಿಕೊಳ್ಳಬೇಕು. ●

**ನಿನ್ನ ತಲೆಯನ್ನೇ ಗುರುವಿಗೆ ನೀಡಿದರೂ ಅದು ಅಲ್ಪವೇ – ಕಬೀರದಾಸ**

# ಶಿಕ್ಷಕ ಸ್ನೇಹ ಸಮ್ಮಿಲನ

## ಬೆಂಗಳೂರು ಉತ್ತರ ಜಿಲ್ಲೆ

02–07–2022ರ ಶನಿವಾರ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ನಡೆಸಿದ ಸದಸ್ಯತ್ವ ನೊಂದಣಿ ಅಭಿಯಾನದಲ್ಲಿ ಹೊಸದಾಗಿ ಸದಸ್ಯತ್ವವನ್ನು ಪಡೆದ ಹಾಗೂ ಪೂರ್ವದಿಂದಲೂ ಸದಸ್ಯರಾಗಿದ್ದ ಶಿಕ್ಷಕರನ್ನು ಸೇರಿಸಿ ನಡೆಸಿಕೊಟ್ಟ "ಶಿಕ್ಷಕ ಸ್ನೇಹ ಸಮ್ಮಿಲನ ಕಾರ್ಯಕ್ರಮವು ಮಲ್ಲೇಶ್ವರಂ 13ನೇ ಅಡ್ಡರಸ್ತೆಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯ ರೋಟರಿ ಸಭಾಂಗಣದಲ್ಲಿ ಜಿಲ್ಲಾ ಖಜಾಂಚಿಗಳಾದ ಶ್ರೀ ಹರಿದಾಸ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸರಸ್ವತಿ ವಂದನೆಯನ್ನು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್ಟರವರು ಎಲ್ಲಾ ಹೊಸ ಸದಸ್ಯರು ಮತ್ತು ನೆರೆದವರೆಲ್ಲರಿಗೂ ಹೇಳಿಕೊಟ್ಟರು.

ಕಾರ್ಯಕ್ರಮದಲ್ಲಿ ನೆರೆದಿದ್ದ ಗಣ್ಯರು ಹಾಗೂ ಎಲ್ಲಾ ಸದಸ್ಯರನ್ನು ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪರವರು ಹಾರ್ದಿಕವಾಗಿ ಸ್ವಾಗತಿಸಿದರು. ನಂತರದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಶಿಕ್ಷಕರು ತಮ್ಮ ಪರಿಚಯವನ್ನು ಮಾಡಿಕೊಟ್ಟರು. ಮೊದಲನೆಯ ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿಯವರು ಸಂಘದ ಸೈದ್ಧಾಂತಿಕ ಹಿನ್ನೆಲೆಯನ್ನು ವಿವರವಾಗಿ ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಳೆದು ಬಂದ ಹಾದಿ, ಸಂಘವನ್ನು ಕಟ್ಟಿ ಬೆಳೆಸಿದ ಎಲ್ಲಾ ಮಹನೀಯರನ್ನು ನೆನೆಯುತ್ತಾ ಸಂಘದ ಮುಖಾಂತರ ಶೈಕ್ಷಣಿಕ ವರ್ಷದಲ್ಲಿ ನಡೆಸುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ವಲಯ–3ರ ಕಾರ್ಯದರ್ಶಿ ಶ್ರೀ ಎಂ.ವಿ ಗಂಗಾಧರರವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಎರಡನೆಯ ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಶಿಕ್ಷಣ ಇಲ್ಲಾಖೆ ಆಯೋಜಿಸಿರುವ "ರಾಷ್ಟ್ರೀಯ ಶಿಕ್ಷಣ" ನೀತಿಯ ಬಗ್ಗೆ ತಿಳಿಸುತ್ತಾ ದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿರುವ ಪ್ರಥಮ ರಾಜ್ಯ ಕರ್ನಾಟಕ ಎಂದು ತಿಳಿಸುತ್ತಾ ಹಂತ ಹಂತವಾಗಿ ಯಾವ ರೀತಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ತಿಳಿಸಿದರು. ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕ ಶಿಕ್ಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಇದ್ದಂತಹ ಅನೇಕ ಗೊಂದಲಗಳನ್ನು ಪ್ರಶ್ನೋತ್ತರದ ಮೂಲಕ ನಿವಾರಿಸಿದರು.

ಬೆಂಗಳೂರು ವಿಭಾಗ ಪ್ರಮುಖರು, ಉತ್ತರವಲಯ–3ರ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ಭಾಗವಹಿಸಿದ್ದ ಎಲ್ಲಾ ಶಿಕ್ಷಕರಿಗೂ ಸ್ವಲ್ಪ ಸಮಯ ಆಟೋಟಗಳನ್ನು ಆಡಿಸಿ ಮನರಂಜನೆ ನೀಡಿದರು. ಆಟದಲ್ಲಿ ಭಾಗವಹಿಸಿ ಶಿಕ್ಷಕರಾದ ಶ್ರೀ ಅಶ್ವತ್ಥನಾರಾಯಣ್‌ರವರು ಪ್ರಥಮ ಬಹುಮಾನ, ಶ್ರೀ ಶಂಷುದ್ದೀನ್‌ರವರು ದ್ವಿತೀಯ ಬಹುಮಾನ, ಉತ್ತರವಲಯ–4ರ ಕಾರ್ಯದರ್ಶಿಯಾದ ಶ್ರೀ ಟಿ.ಆರ್. ಮಂಜುನಾಥ್‌ರವರು ತೃತೀಯ ಬಹುಮಾನ ಪಡೆದರು. ಶಿಕ್ಷಕ ಸ್ನೇಹ ಸಮ್ಮಿಲನದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ನಾರಾಯಣ ಭಟ್ಟರು ವಂದಿಸಿ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ವರದಿ : **ಶ್ರೀ ಎಂ.ವಿ. ಗಂಗಾಧರ,** ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3

# ಗುರುವಂದನಾ ಕಾರ್ಯಕ್ರಮ

## ಬೆಂಗಳೂರು ಉತ್ತರ ಜಿಲ್ಲೆ

16–7–2022 ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ, ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯವತಿಯಿಂದ ವ್ಯಾಸ ಮಹರ್ಷಿಗಳ ನೆನಪಿನಲ್ಲಿ ಗುರುಗಳ ಸೇವೆಗಳನ್ನು ಸ್ಮರಿಸುತ್ತಾ ಅವರಿಗೆ ಮಹೋನ್ನತ ಸ್ಥಾನ ನೀಡಿ ಅವರ ಮೌಲ್ಯಗಳನ್ನು ಆದರ್ಶಗಳನ್ನು ಇಂದಿನ ಪೀಳಿಗೆಗೆ ನೀಡುವಂತಹ "ಗುರುವಂದನಾ" ಕಾರ್ಯಕ್ರಮವನ್ನು ಬೆಟ್ಟಹಲಸೂರು, ಕುದುರಗೆರೆ ಮುಖ್ಯರಸ್ತೆಯಲ್ಲಿರುವ ಪಿ.ಎಮ್.ಎಸ್ ಪಬ್ಲಿಕ್ ಶಾಲೆಯಲ್ಲಿ ವಿಶಿಷ್ಟ ರೀತಿಯಲ್ಲಿ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳೊಂದಿಗೆ ಆಚರಿಸಲಾಯಿತು.

ಪಿ.ಎಮ್.ಎಸ್ ಪಬ್ಲಿಕ್ ಶಾಲೆಯ ಶಿಕ್ಷಕಿ ಶ್ರೀಮತಿ ಸರಸ್ವತಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಿ ಸರಸ್ವತಿ ಮಂತ್ರವನ್ನು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನಾರಾಯಣಭಟ್ಟರು ನಡೆಸಿಕೊಟ್ಟರು. ಕ. ರಾ. ಮಾ. ಶಿ. ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪರವರು ವೇದಿಕೆಯ ಮೇಲಿನ ಗಣ್ಯರನ್ನು ಪರಿಚಯಿಸಿ, ಸಭೆಯಲ್ಲಿ ನೆರೆದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿರುವ ಗಣ್ಯರು ದೀಪ ಪ್ರಜ್ವಲನ ಮಾಡಿ ವ್ಯಾಸ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕ. ರಾ. ಮಾ. ಶಿ. ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿಯವರು ಪ್ರಾಸ್ತಾವಿಕ ಭಾಷಣ 1965ರಲ್ಲಿ ಸಂಘ ಉದಯವಾದಾಗಿನಿಂದ ಸಂಘ ಯಾವ ರೀತಿ ಹಿರಿಯರ ನೇತೃತ್ವದಲ್ಲಿ ನಡೆದುಕೊಂಡು ಬರುತ್ತಿದೆ, ಸಂಘದ ಮುಖಾಂತರ ನಡೆಸಿಕೊಂಡು ಬರುತ್ತಿರುವ ಎಲ್ಲಾ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ವಲಯ–3 ರ ಕಾರ್ಯದರ್ಶಿ ಶ್ರೀ ಎಂ.ವಿ ಗಂಗಾಧರರವರು ನಡೆಸಿಕೊಟ್ಟರು.

ಕಾರ್ಯಕ್ರಮದ ಮುಖ್ಯ– ಅತಿಥಿಗಳು, ಪ್ರಮುಖ ವಕ್ತಾರರು ಆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರು, ಸಮಾಜ ಸೇವಕರಾದ ಶ್ರೀ ಉಮೇಶ್ ಜಿಯವರು ಭಾರತದ ಶ್ರೇಷ್ಠ ಗುರು ಪರಂಪರೆಯನ್ನು ನೆನಪಿಸುತ್ತಾ ಶಿಕ್ಷಕರು ಭವಿಷ್ಯ ಭಾರತದ ನಿರ್ಮಾತೃಗಳು, ದೇಶ ಹಾಗೂ ಸಮಾಜದ ಭವಿಷ್ಯ ರೂಪಿಸುವವರು. ಶಿಕ್ಷಕರು, ವಿದ್ಯಾರ್ಥಿಗಳಲ್ಲಿ ಸಂಸ್ಕಾರವನ್ನು ಬೆಳೆಸಿದಾಗ ಸಂಸ್ಕೃತಿ ಬೆಳೆಯುತ್ತದೆ. ಅದಿಲ್ಲದಿದ್ದರೆ ವಿಕೃತಿಯಾಗುತ್ತದೆ ಎಂಬುದನ್ನು ತಿಳಿಸುತ್ತಾ ಎಲ್ಲಾ ಗುರುಗಳು ಸಹ ಉತ್ತಮ ಮೌಲ್ಯಗಳನ್ನು ಹೊಂದಿ ಶ್ರೇಷ್ಠ ಪರಂಪರೆಗೆ ನಾಂದಿ ಹಾಕೋಣ ಎಂದು ತಿಳಿಸಿದರು.

ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪಿ ಎಮ್ ಎಸ್ ಪಬ್ಲಿಕ್ ಶಾಲೆಯ ಮುಖ್ಯಸ್ಥರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಉಪಾಧ್ಯಕ್ಷರು ಆದ ಶ್ರೀ ಎ.ಸಿ ಪ್ರದೀಪ್‌ರವರು ದೇಶದ ಅಭಿವೃದ್ಧಿಯಲ್ಲಿ ಯಾವ ರೀತಿ ರೈತ, ಸೈನಿಕ ಮತ್ತು ಶಿಕ್ಷಕರು ಪ್ರಮುಖ ಪಾತ್ರ ವಹಿಸಿದ್ದಾರೆ ಮತ್ತು ಶಿಕ್ಷಕರು ವಿದ್ಯಾರ್ಥಿಗಳ ಜೀವನದಲ್ಲಿ ಎಷ್ಟು ಪ್ರಮುಖ ಪಾತ್ರವಹಿಸುತ್ತಾರೆ ಎಂದು ತಿಳಿಸಿದರು.

ಬೆಂಗಳೂರು ವಿಭಾಗ ಪ್ರಮುಖರು, ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೊಡಗಿಯವರು ವಂದನಾರ್ಪಣೆ ನಡೆಸಿಕೊಟ್ಟರು. ಶ್ರೀ ನಾರಾಯಣ ಭಟ್ಟರು ಮುಂದಿನ ಆಗಸ್ಟ್‌ನಲ್ಲಿ ಎಲ್ಲಾ ಶಾಲೆಗಳಲ್ಲಿ ಆಚರಿಸುವ ಭಾರತದ 75ನೇ ಅಮೃತ ಮಹೋತ್ಸವದ ಬಗ್ಗೆ ತಿಳಿಸುತ್ತಾ ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ: ಶ್ರೀ ಎಂ.ವಿ ಗಂಗಾಧರ,** ಕಾರ್ಯದರ್ಶಿ

➢ ಪುಟ 5 ರಿಂದ.....

ಖುದ್ದಾಗಿ ತಾನೇ ಪರಿಶೀಲಿಸುತ್ತಿದ್ದರು. ಕೋಶ ಪ್ರಮುಖರಿಗೆ ಸೂಚನೆ ನೀಡುವ ಒಂದು ಆಜ್ಞಾಪತ್ರವನ್ನು ಜಾರಿಗೆ ತಂದರು.

ಹೋಲ್ಕರ್ ರಾಜ್ಯದ ಹಳೆಯ ಅಧಿಕಾರಿಯಾಗಿದ್ದ ಗಂಗಾಧರ ಚಂದ್ರಚೂಡನಿಗೆ ದುರಾಲೋಚನೆಯೊಂದು ಉಂಟಾಯಿತು. ಹೋಲ್ಕರ್ ಸಂಸ್ಥಾನದಲ್ಲಿ ಓರ್ವ ಮಹಿಳೆ ಇರುವುದರಿಂದ ಇದನ್ನು ವಶಪಡಿಸಿಕೊಳ್ಳುವುದು ಸುಲಭ ಎಂದು ಯೋಚಿಸಿದ. ರಘೋಬಾ ದಾದಾ ಪೇಶ್ವೆಗೆ ಒಂದು ಗುಪ್ತಪತ್ರ ಕಳುಹಿಸಿದನು. ದೊಡ್ಡ ಸೇನೆಯೊಂದಿಗೆ ಅವರು ಇಂದೋರಾಗೆ ಆಗಿಮಿಸಿದರು. ಆದರೆ ಅಹಲ್ಯಾಬಾಯಿಯವರ ಚಾಣಾಕ್ಷ ಯುದ್ಧ ನೀತಿಯ ಅರಿವಿನಿಂದ ತನ್ನ ಮಹಿಳಾ ಸೇನೆಯನ್ನು ಸಜ್ಜುಗೊಳಿಸಿದರು ಮತ್ತು ರಘೋಬಾ ದಾದಾ ಪೇಶ್ವೆಗೆ ಎಚ್ಚರಿಕೆ ನೀಡಿದರು "ನಿಮ್ಮ ಇಚ್ಛೆ ಎಂದೂ ಪೂರ್ಣಗೊಳ್ಳದು. ತಾವು ನನ್ನನ್ನು ಅಬಲೆಯೆಂದು ತಿಳಿದಿರಬಹುದು, ಆದರೆ ನಾನು ಏನೆಂಬುದು ರಣರಂಗದಲ್ಲಿ ಪರಿಚಯವಾದೀತು. ನಿಮ್ಮನ್ನು ಸೋಲಿಸಲು ನನ್ನ ಪುಟ್ಟ ಮಹಿಳಾ ಸೇನೆಯೇ ಸಾಕು. ಸರಿಯಾಗಿ ವಿಚಾರಮಾಡಿ ಯುದ್ಧಕ್ಕೆ ಮುಂದೆ ಬನ್ನಿ ಎಂದರು. ರಘೋಬಾಗೆ ಅರಿವಾಗಿ ಸೋಲೊಪ್ಪಿಕೊಳ್ಳಬೇಕಾಯಿತು.

ಯಾವುದೇ ಸಮಯದಲ್ಲೂ ಅವಶ್ಯಕತೆಗಿಂತ ಹೆಚ್ಚು ತೆರಿಗೆಯನ್ನು ವಿಧಿಸುವಂತಿರಲಿಲ್ಲ. ಎಷ್ಟೇ ದೊಡ್ಡ ಅಧಿಕಾರಿಯಾಗಿದ್ದರೂ ಅಹಲ್ಯಾಬಾಯಿ ಯವರಿಗೆ ತಿಳಿಸದೇ ಮನಸೋ–ಇಚ್ಛೆಯಂತೆ ನಡೆಯುವಂತಿರಲಿಲ್ಲ. ರಾಜ್ಯ ಬೊಕ್ಕಸದ ಒಂದು ಪೈಸೆಯೂ ವ್ಯಕ್ತಿಗತ ಕಾರ್ಯಕ್ಕೆ ಖರ್ಚುಮಾಡಲಿಲ್ಲ. ಪ್ರತಿಯೊಂದಕ್ಕೂ ಲೆಕ್ಕವಿಡುವಂತಹ ಅತ್ಯಂತ ಸ್ವಚ್ಛ ನಡತೆ ಅವರದಾಗಿತ್ತು. ತೀರಾ ಸಾಮಾನ್ಯ ಪ್ರಜೆಯೂ ಕೂಡ ದೇವಿಯವರನ್ನು ಭೇಟಿಯಾಗ ಬಹುದಿತ್ತು. ಮಧ್ಯಾಹ್ನದಿಂದ ಸಂಜೆಯವರೆಗೆ ಮತ್ತು ರಾತ್ರಿಯ ಭೋಜನದ ನಂತರ ರಾತ್ರಿ ಹನ್ನೆರಡು ಗಂಟೆಯತನಕ ಅವರು ದರಬಾರಿನಲ್ಲಿ ಇರುತ್ತಿದ್ದರು. ಇತರ ರಾಜರುಗಳಂತೆ ರಾಜ ವೈಭೋಗದಲ್ಲಿ ಇರಲು ಬಯಸದೆ, ಧರ್ಮಕರ್ಮಗಳ ಉಪಾಸನೆಯಲ್ಲಿ ಪ್ರಜಾ ಕಲ್ಯಾಣದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು. ಇದರಿಂದಲೇ ಅವರಿಗೆ 'ಲೋಕಮಾತೆ' ಎನ್ನುವ ಬಿರುದು ದೊರಕಿತು. ವಿಶಾಲ ಸಂಪದ್ಭರಿತ ದೇಶದ ರಾಣಿಯಾಗಿದ್ದರೂ ಅಹಲ್ಯಾಬಾಯಿಯವರು ವಿರಾಗಿಣಿಯಂತೆ ಸಾಧಾರಣ ಜೀವನದಿಂದ ಸಾಮಾನ್ಯ ಭವನವೊಂದರಲ್ಲಿ ವಾಸಿಸುತ್ತಿದ್ದರು. ಅದು ಭಗವನ್ಮಂದಿರದಂತಿತ್ತು. ಇದರಿಂದ ತನ್ನ ರಾಜಕೀಯ ಜೀವನಕ್ಕೆ ಪವಿತ್ರತೆಯನ್ನು ನೀಡಲು ಸಾಧ್ಯವಾಯಿತು. ಪ್ರಜೆಗಳು ಇವರ ಮಾತೃವಾತ್ಸಲ್ಯಕ್ಕೆ ರಾಜ ನೀತಿ, ನಿಷ್ಠೆಗೆ ಮೆಚ್ಚಿ, ಯಾವುದೇ ಒತ್ತಡ ಆಮಿಶೆಗಳಿಗೆ ಬಲಿಯಾಗದೆ ಪ್ರಾಮಾಣಿಕ ಪ್ರಜೆಗಳಾಗಿದ್ದು ಬಹಳ ವಿಶೇಶವಾಗಿತ್ತು.

**ದೇವೀ ಅಹಲ್ಯಾಬಾಯಿವರ ನ್ಯಾಯ ವ್ಯವಸ್ಥೆ:**

ಮಹತ್ಪುರ ರಾಜಪುತ್ರರು ತಮ್ಮ ಅಹವಾಲು, ದೂರನ್ನು ತಿಳಿಸಿದಾಗ ಸಂಬಂಧಿಸಿದ ಅಧಿಕಾರಿಗೆ ತಿಳಿಸಿ ಹನ್ನೊಂದು ಸೂತ್ರದ ಪತ್ರವೊಂದನ್ನು ಕೊಟ್ಟರು. ಇದು ಅವರ ನ್ಯಾಯಬುದ್ಧಿಗೆ ದ್ಯೋತಕವಾಗಿದೆ. ಯಾರಿಂದಲೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣವನ್ನು ರಾಜ್ಯಬೊಕ್ಕಸಕ್ಕೆ ಸೇರಿಸುವಂತಿರಲಿಲ್ಲ. ಒಂದು ವೇಳೆ ಹೆಚ್ಚಿಗೆ ಸಂದಾಯವಾಗಿದ್ದರೆ ಕೂಡಲೇ ಅದನ್ನು ಹಿಂತಿರುಗಿಸಲಾಗುತ್ತಿತ್ತು. ಅಲ್ಲಿಯೇ ಅಡಿಗೆ ಕೆಲಸಮಾಡಿಕೊಂಡಿದ್ದ ರಘುನಾಥ ಸಿಂಹ ತಿವಾರೀ ಮೃತಪಟ್ಟಾಗ ಅವನ 426 ರೂ 3 ಆಣೆ, 6 ಪೈಸೆಯಷ್ಟು ಸಂಪತ್ತನ್ನು ಅವನಿಗೆ ಮಕ್ಕಳಿಲ್ಲದ ಕಾರಣ ರಾಜಕೋಶಕ್ಕೆ ಸೇರಿಸಲಾಯಿತು. ಆನಂತರ ಅವನಿಗೆ ಒಬ್ಬ ಮಗನಿದ್ದಾನೆ ಎಂದು ತಿಳಿದು ಆ ಕೂಡಲೇ ಈ ಹಣವನ್ನು ದೇವಿಯವರು ಹಿಂತಿರುಗಿಸುತ್ತಿದ್ದರು.

ಒಮ್ಮೆ ಡಕಾಯಿತರು ಕಾಡಿನ ದಾರಿಯಾಗಿ ಸಾಗುವ ಯಾತ್ರಿಗಳ ವಸ್ತುಗಳನ್ನು ದೋಚುತ್ತಿದ್ದರು. ವಿಷಯ ತಿಳಿದ ದೇವಿಯವರು ಅವರನ್ನು ಹಿಡಿದು ತರುವಂತೆ ಆಜ್ಞಾಪಿಸಿದರು. ಬಹಳ ದೊಡ್ಡ ಶಿಕ್ಷೆ ವಿಧಿಸಬಹುದು ಎಂದು ಭಾವಿಸಿದ್ದ ಬೀಲ ಎಂಬ ಡಕಾಯಿತ. ಆದರೆ ದೇವಿಯವರು ಈ ರೀತಿ ಜನರಿಗೆ ತೊಂದರೆ ಕೊಡುವುದಕ್ಕೆ ಕಾರಣವೇನು ? ಎಂದು ಕೇಳಿದರು. ಅದಕ್ಕೆ ಅವನು ದೇವಿಯವರೆ ನಮಗೆ ಜೀವಿಸಲು ಅನ್ಯಮಾರ್ಗವಿಲ್ಲ. ಎಲ್ಲರೂ ನಮ್ಮನ್ನು ಹೀನದೃಷ್ಟಿಯಿಂದ ಕಾಣುತ್ತಾರೆ ಎಂದು ಹೇಳಿದನು. ಅದಕ್ಕೆ ದೇವಿಯವರು "ನೀವುಗಳು ಶಸ್ತ್ರ ಚಾಲನೆ ತಿಳಿದಿದ್ದೀರೇನು? ಎಂದು ಕೇಳಿದಾಗ ಅವನು ಹೌದು ಎಂದನು. ಆಗ ಅಹಲ್ಯಾಬಾಯಿಯವರು ರಾಜ್ಯದ ಸೈನ್ಯಕ್ಕೆ ಸೇರಿಕೊಂಡು ವೈರಿಗಳೊಡನೆ ಹೋರಾಡುವಿರೇನು? ನಿಮಗೆ ಶಸ್ತ್ರಾಸ್ತ್ರಗಳು, ವೇತನ, ಬಟ್ಟೆ ಇತರ ಸೌಲಭ್ಯ ಜೊತೆಗೆ ಮರ್ಯಾದೆಯೂ ಲಭಿಸುವುದು" ಎಂದು ಹೇಳಿದರು. ಹೀಗೆ ಎಂತಹಾ ಕ್ರೂರಿಯಾದರೂ ಇವರ ಮಾತೃಪ್ರೀತಿಯಿಂದ ಬದಲಾಯಿಸುವ ಶಕ್ತಿ ಇವರಲ್ಲಿತ್ತು.

ಇಷ್ಟೆಲ್ಲಾ ಸಾಧನೆಗೈದ ದೇವಿ ಕುರಿತು ಒಂದು ಗ್ರಂಥವನ್ನು ಒಬ್ಬ ಕವಿ ಬರೆದಿದ್ದ. ಅದಕ್ಕೆ ಅವರು ನಾನೊಬ್ಬ ಸಾಮಾನ್ಯೆ ನನ್ನ ಬಗ್ಗೆ ಬರೆಯುವ ಬದಲು ಭಗವಂತನನ್ನು ಸ್ತುತಿಸಿದರೆ ಪ್ರಸನ್ನನಾಗುತ್ತಾನೆ ಎಂದರು. ಆ ಗ್ರಂಥವನ್ನು ತಾವು ನರ್ಮದೆಯ ಪ್ರವಾಹಕ್ಕೆ ಬಿಟ್ಟುಬಿಟ್ಟರು.

ಸುವರ್ಣಭೂಮಿ ಭಾರತದ ಮೇಲೆ ವಿದೇಶೀ ಆಕ್ರಮಣದಿಂದ ದೇಶವನ್ನು ಕೊಳ್ಳೆ ಹೊಡೆದು ರಾಜ್ಯಗಳ ಮಾನ ಚಿಹ್ನೆಗಳನ್ನು ಅಪಮಾನ ಗೊಳಿಸುತ್ತ, ಮಹಿಳೆಯರನ್ನು ಅಪಹರಿಸುತ್ತ, ಹಿಂದೂ ಧಾರ್ಮಿಕ ಮಂದಿರಗಳನ್ನು ಲೂಟಿಮಾಡುತ್ತಿದುದನ್ನು ಕಂಡ ಅಹಲ್ಯಾದೇವಿಯವರು ನೊಂದು ರಾಷ್ಟ್ರೀಯ ಏಕತೆಯನ್ನು ಮನದಲ್ಲಿ ತುಂಬಿಕೊಂಡು ಬದರೀ ನಾರಾಯಣದಿಂದ ರಾಮೇಶ್ವರದವರೆಗೆ, ದ್ವಾರಕೆಯಿಂದ ಭುವನೇಶ್ವರದವರೆಗೆ ಅನೇಕ ದೇವಾಲಯಗಳನ್ನು ಪುನಃ ನಿರ್ಮಾಣ ಮಾಡಿ ಪುನಃಪೂಜೆ, ಧಾರ್ಮಿಕ ಗ್ರಂಥಪಠಣ ಮೊದಲಾದವುಗಳನ್ನು ನಡೆಯುವಂತೆ ಮಾಡಿದರು.

ರಾಜ ಪದವಿಯು ವಿಲಾಸ ಮತ್ತು ಉಪಭೋಗಕ್ಕಾಗಿ ಇರುವುದಿಲ್ಲ. ಅದು ಹೆಚ್ಚು ಪರಿಶ್ರಮ ಕರ್ತವ್ಯ ಪಾಲನೆಗಾಗಿಯೇ ಇರುವುದೆಂದು ತೋರಿಸಿಕೊಟ್ಟ ದಿವ್ಯ ಚೇತನರಾದ ರಾಣಿ, ದೇವಿ ಅಹಲ್ಯಾಬಾಯಿಯವರಿಗೆ ವಿನಮ್ರ ನಮನಗಳು. ●

# ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರೊಂದಿಗೆ ಚರ್ಚೆ

ಶಿಕ್ಷಕರ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ದಿನಾಂಕ: 30/06/2022 ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಬಿ.ಸಿ. ನಾಗೇಶ್ ಅವರೊಂದಿಗೆ ಚರ್ಚೆ ನಡೆಸಲಾಯಿತು.

**ಚರ್ಚೆಯ ವಿಷಯಗಳು :** ● ಜೆ.ಓ.ಸಿ ಯಿಂದ ವಿಲೀನವಾದ ಶಿಕ್ಷಕರ ಸಮಸ್ಯೆಗಳು. ● ಪ್ರೌಢಶಾಲೆಯಿಂದ ಪದವಿ ಪೂರ್ವಕ್ಕೆ ಮತ್ತು ಪದವಿ ಪೂರ್ವ ಉಪನ್ಯಾಸಕರಿಂದ ಪ್ರಾಚಾರ್ಯರ ಹುದ್ದೆಗೆ ಬಡ್ತಿ. ● ಹಿಂದಿ ಮತ್ತು ಸಂಸ್ಕೃತ ವಿಷಯ ಶಿಕ್ಷಕರ ಸಮಸ್ಯೆ. ● ಹೆಚ್ಚುವರಿ ಪ್ರಕ್ರಿಯೆಯಲ್ಲಿ ಚಿತ್ರಕಲೆ, ಸಂಗೀತ, ವೃತ್ತಿ ಶಿಕ್ಷಣ ಶಿಕ್ಷಕರ ಸಮಸ್ಯೆ. ● ಕಲಿಕಾ ಚೇತರಿಕೆ. ● ಅನುದಾನಕ್ಕೆ ಒಳಪಡಿಸುವ ಮತ್ತು ಅನುದಾನಿತ ಶಿಕ್ಷಕರ ಸಮಸ್ಯೆಗಳು.

ಈ ಎಲ್ಲ ವಿಷಯಗಳಿಗೆ ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿರುವದಕ್ಕೆ ಧನ್ಯವಾದಗಳು.

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

## ದೇಶ ಪ್ರೇಮಿ ಸುಬ್ರಹ್ಮಣ್ಯ ಭಾರತಿ

ಸುಬ್ರಹ್ಮಣ್ಯ ಭಾರತಿಯವರು ಓರ್ವ ಕವಿ, ದೇಶಭಕ್ತ, ತತ್ವಜ್ಞಾನಿ, ಪತ್ರಿಕೋದ್ಯಮಿ. ಸ್ವಾಮಿ ವಿವೇಕಾನಂದರ ಶಿಷ್ಯೆ ಸೋದರಿ ನಿವೇದಿತಾಳಿಂದ ದೇಶಪ್ರೇಮದ ಬೀಜ ಅಂಕುರಗೊಂಡು ಸ್ವಾತಂತ್ರ್ಯ ಹೋರಾಟಗಾರರಿಗೆ ತಮ್ಮ ಕವಿತೆಗಳ ಮೂಲಕ ಸ್ವಾತಂತ್ರ್ಯ ಹಣತೆಯನ್ನು ಹಚ್ಚಿದವರಲ್ಲಿ ಸುಬ್ರಹ್ಮಣ್ಯ ಭಾರತಿಯವರು ಅಗ್ರಗಣ್ಯರು.

ಸುಬ್ರಹ್ಮಣ್ಯ ಭಾರತಿಯವರಿಗೆ ಚಿಕ್ಕಂದಿನಲ್ಲಿಯೇ ಕವಿತೆಗಳ ರಚನೆಯಲ್ಲಿ ಅದ್ಭುತ ಶಕ್ತಿ ಇತ್ತು. ಅವರ 11ನೇ ವಯಸ್ಸಿನಲ್ಲಿಯೇ 'ಭಾರತಿ' ಎಂಬ ಕಾವ್ಯನಾಮ ದೊರಕಿತು. ಮಧುರೆಯ ಕಾಲೇಜಿನಲ್ಲಿ ತಮಿಳು ಪಂಡಿತರಾಗಿ ಕಾರ್ಯವನ್ನು ನಿರ್ವಹಿಸಿದರು. 'ಸ್ವದೇಶ ಮಿತ್ರನ್' ಪತ್ರಿಕೆಯ ಉಪ ಸಂಪಾದಕರಾಗಿ ರಾಜಕೀಯ ಕ್ಷೇತ್ರಕ್ಕೆ ಬಂದರು ಹಾಗೂ ಇಂಡಿಯ ವಾರಪತ್ರಿಕೆಯ ಸಂಪಾದಕರಾಗಿ ದೇಶಪ್ರೇಮವನ್ನು ಪ್ರೇರೇಪಿಸಿದರು.

ಭಾರತದ ಸ್ವಾತಂತ್ರ್ಯ ಸಾಧನೆಯಲ್ಲಿನ ಇವರ ಪಾತ್ರವು ಸುವರ್ಣಾಕ್ಷರದಲ್ಲಿ ಬರೆದಿಡುವಂತದ್ದಾಗಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ಧೀರ ವೀರ ಪಾಂಡ್ಯ ಕಟ್ಟಬೊಮ್ಮನ್ ಹುಟ್ಟಿದ ಊರಲ್ಲೇ ಇವರೂ ಕೂಡ ಜನ್ಮತಾಳಿದ್ದು, ಹೀಗಾಗಿ ಸ್ವಾತಂತ್ರ್ಯದ ಕೆಚ್ಚು ಮೈಗೂಡಿತ್ತು. ನಿಷ್ಠಾವಂತ ಹಿಂದುವಾದರೂ ಕೂಡ ಎಲ್ಲ ಮತಗಳಿಗೂ ಗೌರವ ಕೊಡುತ್ತಿದ್ದರು. ಇವರ ನೂರಾರು ಕವಿತೆಗಳು ದೇಶಾಭಿಮಾನಿಗಳಿಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿ ಬ್ರಿಟಿಷರ ವಿರುದ್ಧ ರೊಚ್ಚಿಗೇಳುವಂತೆ ಮಾಡಿದವು. ಪದ್ಯದ ಜೊತೆಗೆ ಗದ್ಯದ ರಚನೆಯನ್ನು ಮಾಡಿದ್ದಾರೆ. ಹೆಚ್ಚು ಕವಿತೆಗಳನ್ನು ತಮಿಳಿನಲ್ಲಿಯೇ ರಚಿಸಿದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಜನರೆಲ್ಲರೂ ಒಂದೇ, ನಾವೆಲ್ಲ ಭಾರತಮಾತೆಯ ಮಕ್ಕಳು ಎಂಬ ಭಾವನೆ ಅವರ ಕವಿತೆಗಳ ಸಾರವಾಗಿತ್ತು.

ಸುಬ್ರಹ್ಮಣ್ಯ ಭಾರತಿಯವರು ಸ್ವಾತಂತ್ರ್ಯ ಪಡೆಯಲು ನಿರ್ಭಯರಾಗಿರಬೇಕು. ಮಾತೃಭಾಷೆ, ಮಾತೃಭೂಮಿಯನ್ನು ಪ್ರೀತಿಸಬೇಕು, ಭಾರತೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕು ಎಂಬ ಸಂದೇಶವನ್ನು ನೀಡಿದ ಮಹಾನ್ ಚೇತನರಾಗಿದ್ದರು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ 'ಕೇಸರಿ' ಎಂಬ ಪತ್ರಿಕೆಯ ರೂವಾರಿ ಯಾರಾಗಿದ್ದರು?
2. ಅಮೋಘ ವರ್ಷ ನೃಪತುಂಗ ಯಾವ ರಾಜವಂಶಕ್ಕೆ ಸೇರಿದವನಾಗಿದ್ದಾನೆ?
3. ಕಾಶ್ಮೀರವು ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದಾಗ ಅಲ್ಲಿನ ರಾಜ ಯಾರಿದ್ದರು?
4. ಹೋಂ ರೂಲ್ ಚಳುವಳಿಯ ನಾಯಕರು ಯಾರು?
5. ಮಗಧ ಸಾಮ್ರಾಜ್ಯದ ಮೊಟ್ಟಮೊದಲ ರಾಜಧಾನಿ ಯಾವುದು?

## ಜ್ಞಾನ ವಿಜ್ಞಾನ

1. ಭಾರತದ ಯೋಜನಾ ಆಯೋಗದ ಅಧ್ಯಕ್ಷರು ಯಾರು?
2. ಭಾರತದಲ್ಲಿ ಮೊದಲ ಬಾರಿ ವಿದ್ಯುತ್ ಸಂಪರ್ಕ ಪಡೆದ ನಗರ ಯಾವುದು?
3. ಅತ್ಯಂತ ಹಗುರವಾದ ಅನಿಲ ಯಾವುದು?
4. ಹಾಲಿನಲ್ಲಿ ಯಾವ ಜೀವಸತ್ವ ಇರುತ್ತದೆ?
5. ಇನ್‌ಸುಲಿನ್ ಕೊರತೆಯಿಂದ ಬರುವ ರೋಗವನ್ನು ತಿಳಿಸಿ.

## ಜೂನ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಝಾನ್ಸಿ ರಾಣಿ ಲಕ್ಷ್ಮೀಬಾಯಿ
2. ರಾಜಾರಾಮ ಮೋಹನರಾಯ
3. ಆರ್ಯಸಮಾಜ
4. ದಯಾನಂದ ಸರಸ್ವತಿ
5. ಡಾ॥ ಆತ್ಮಾರಾಮ ಪಾಂಡುರಂಗ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಜೂನ್–05
2. ಜೂನ್–21
3. ಸ್ಪಿಗ್ಮೋಮಾನೊಮೀಟರ್
4. ಅಮ್ಮೀಟರ್
5. ರಾಕೇಶ್ ಶರ್ಮಾ

# ಸ್ವಾತಂತ್ರ್ಯದ ಅಮೃತ ಮಹೋತ್ಸವ – “ಇಂಡಿಯಾದಿಂದ ಭಾರತದಡೆಗೆ”

75 ವರ್ಷದ ಹಿಂದೆ ಕೆಂಪುಕೋಟೆಯಲ್ಲಿ ನಮ್ಮ ಅಧೀನತೆಯ ಸಂಕೇತವಾದ ಯೂನಿಯನ್ ಜಾಕ್ ಅನ್ನು ತೆಗೆದುಹಾಕಲಾಯಿತು ಮತ್ತು ನಮ್ಮ ಸ್ವಾತಂತ್ರ್ಯದ ಸಂಕೇತವಾದ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು.

- ಸಮಯದ ಬಿಂದುವು ಆಚರಣೆಯ ಸಮಯ ಮಾತ್ರವಲ್ಲ, ಅದು ಚಿಂತನೆಯ ಸಮಯವೂ ಆತದೆ.
- ನಿಜವಾದ ಅರ್ಥದಲ್ಲಿ ಆಗಸ್ಟ್ 15 ರಂದು ನಾವು ಸಾಧಿಸಿದ ಸ್ವಾತಂತ್ರ್ಯ ಏನು?
- ಯಾವ ಸ್ವಾತಂತ್ರ್ಯವನ್ನು ಗಳಿಸಲು ಶತಮಾನಕ್ಕಿಂತ ಹೆಚ್ಚು ಕಾಲ ಹೋರಾಟ ಮಾಡಿದೆವೋ ಅದಕ್ಕಾಗಿ ಪ್ರತಿಯೊಂದು ಧರ್ಮ, ಜಾತಿ ಮತ್ತು ವರ್ಗದ ಜನರು ತಮ್ಮ ವೃತ್ತಿಜೀವನ, ಕುಟುಂಬ ಮತ್ತು ಜೀವನವನ್ನು ತ್ಯಾಗ ಮಾಡಿದರು.
- ಅಧಿಕಾರದ ಹಸ್ತಾಂತರಕ್ಕೆ ಮಾತ್ರ ಸ್ವಾತಂತ್ರ್ಯ ಚಳುವಳಿಯ ಪರಾಕಾಷ್ಠೆ ಸೀಮಿತವಾಯಿತೇ? ಬ್ರಿಟಿಷರನ್ನು ಹೊರಹಾಕಲು ಈ ಹೋರಾಟ ಸೀಮಿತವಾಯಿತೇ ಅಥವಾ ತಂತ್ರ ಬದಲಾವಣೆಗೆ ಮಾತ್ರ ಸೀಮಿತವಾಯಿತೇ?
- ನಾವು ಯೋಚಿಸಿದರೆ ನಮ್ಮ ದೃಷ್ಟಿ ಸಾವಿರ–ಹನ್ನೆರೆಡು ಸಾವಿರ ಹಿಂದಿನವರೆಗೂ ಹೋಗುತ್ತದೆ, ಇದು ಕೇವಲ 190 ವರ್ಷದ ಸಂಘರ್ಷ ಮಾತ್ರವಲ್ಲ.
- ಘಜನಿ–ಗೌರಿಯಿಂದು ಹಿಡಿದು ಬ್ರಿಟಿಷರವರೆಗೆ ಭಾರತದ ಸಂಘರ್ಷ ತನ್ನ ‘ಸ್ವ’ ಗುರುತಿನ ಹೋರಾಟವಾಗಿತ್ತು. ಅರಬ್, ತುರ್ಕರು, ಅಫ್ಘಾನಿಸ್ತಾನಿಗಳು, ಮೊಘಲರು, ಡಚ್ಚರು, ಬ್ರಿಟಿಷರು ಇನ್ನೂ ಮುಂತಾದವರೊಂದಿಗೆ ಭಾರತೀಯ ಸಮಾಜ ತನ್ನ ಸ್ವಂತಿಕೆಯನ್ನು ಬಿಟ್ಟು ಕೊಡದೇ ಹೋರಾಟವನ್ನು ಮಾಡಿದೆ.
- ಆರು ಕೋಟಿ ಭಾರತೀಯರ ಬಲಿದಾನ 700–800 ವರ್ಷಗಳ ಕಾಲಖಂಡದಲ್ಲಿ ಆಗಿದೆ. ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ಬಲಿದಾನವಾಗಿದ್ದಾರೆ. ಇಡೀ ವಿಶ್ವದಲ್ಲಿ ಜೌಹರ್‌ನಂತಹ ಉದಾಹರಣೆ ಇನ್ನೆಲ್ಲಿಯೂ ಸಿಗುವುದಿಲ್ಲ.
- ಮಹಾರಾಣಾ ಪ್ರತಾಪ್, ಶಿವಾಜಿ, ಪೃಥ್ವಿರಾಜ ಚೌಹಾನ್, ರಾಜಾ ಛತ್ರಸಾಲ, ಸುಹೆಲದೇವ, ರಾನೀ ದುರ್ಗಾವತಿ, ವಿಜಯನಗರದ ರಾಜರಾದ ಹರಿಹರ, ಕೃಷ್ಣದೇವರಾಯ ಮುಂತಾದವರು ತಮ್ಮ ಸ್ವಂತಿಕೆಗಾಗಿಯೇ ಆಕ್ರಮಣಕಾರರ ವಿರುದ್ಧ ಹೋರಾಟ ಮಾಡುತ್ತಿದ್ದರು. ಒಣಗಿರುವುದು ಒಪ್ಪಿಗೆಯಿತ್ತು, ಜೀವ ಕೊಡಲು ತಯಾರಿದ್ದರು, ಆದರೆ ತಮ್ಮ ಸ್ವಂತಿಕೆಯನ್ನು ಮತ್ತು ಧರ್ಮದ ಜೊತೆ ರಾಜಿ ಮಾಡಕೊಳ್ಳುವುದು ಸ್ವೀಕಾರಾರ್ಹವಾಗಿರಲಿಲ್ಲ.
- ವಿದೇಶಿ ಆಕ್ರಮಣಕಾರರ ದೌರ್ಜನ್ಯಗಳು ಹೆಚ್ಚಾದಾಗ ಹತಾಶೆಯ ವಾತಾವರಣವನ್ನು ಆಧ್ಯಾತ್ಮ ಸ್ವಾಧೀನ ಪಡಿಸಿಕೊಂಡಿತು. ಹಾಗೆಯೇ ಸಂತರ ಸಂಪ್ರದಾಯ ಉದಾಹರಣೆಗೆ ಚೈತನ್ಯ ಮಹಾಪ್ರಭು, ರಾಮಕೃಷ್ಣ ಪರಮಹಂಸ, ಮೀರಾಬಾಯಿ, ಏಕನಾಥ, ತುಕಾರಾಮ, ಸಮರ್ಥ ರಾಮದಾಸ, ಜ್ಞಾನೇಶ್ವರ, ರಮಾನಂದ, ಕಬೀರ್, ತುಲಸಿ, ಸೂರದಾಸ್, ರೈದಾಸ್, ನಿಂಬಾರಕಚಾರ್ಯ, ಮಧ್ವಚಾರ್ಯ, ವಲ್ಲಭಚಾರ್ಯ, ರಾಮಾನುಜಚಾರ್ಯ ಮುಂತಾದವರು. ಶಾಶ್ವತ ಅಸ್ಮಿತೆಯ ಜ್ಯೋತಿಯನ್ನು ಬೆಳಗಿಸಿದರು. ಹತ್ತು ಸಿಖ್ ಗುರುಗಳ ಸಂಪ್ರದಾಯದವರು ಅಂದರೆ ನಾನಕರಿಂದ ಗುರು ಗೋವಿಂದರವರೆಗೆ ಪ್ರತಿಯೊಬ್ಬರು ಹೋರಾಡಿದರು.
- ಕ್ರಮೇಣ ಭಾರತೀಯ ರಾಜರುಗಳ ಪ್ರಭಾವ ಹೆಚ್ಚಾಯಿತು. ಮರಾಠರು, ರಜಪೂತರು, ಸಿಖ್ಖರು, ಹೋಲ್ಕರರು, ಗಾಯಕ್‌ವಾಡರು, ಮೈಸೂರು ಮಹಾರಾಜರು ಭಾರತೀಯ ಸಂಪ್ರದಾಯದಂತೆ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇಂತಹ ಹೋರಾಟದ ಸಮಯದಲ್ಲಿ ಬ್ರಿಟಿಷರು ವ್ಯಾಪಾರಿಗಳಾಗಿ ಭಾರತಕ್ಕೆ ಬಂದರು.
- ಲೂಟಿ ಮತ್ತು ಮತಾಂತರದ ಜೊತೆಗೆ ಬ್ರಿಟಿಷರು ಗಂಭೀರವಾದ ಸೈದ್ಧಾಂತಿಕ ಹೊಡೆತಗಳನ್ನು ನೀಡಿದರು ಮತ್ತು ದೇಶವಾಸಿಗಳನ್ನು ಮಾನಸಿಕ ಗುಲಾಮಗಿರಿಗೆ ಒಳಪಡಿಸಿದರು.
- ಭಾರತವು ಮತ್ತೇ ಹೋರಾಟದ ಹಾದಿಯಲ್ಲಿ ಸಾಗಬೇಕಾಯಿತು. 1857 ರಿಂದ ಇಡೀ ದೇಶದಲ್ಲಿ ಚಳುವಳಿ ಮೇಲುಗೈ ಸಾಧಿಸಿತು ಮತ್ತು ಯಾವುದೇ ಧರ್ಮ, ಜಾತಿ, ವರ್ಗಗಳು ಇದರಿಂದ ಅಸ್ಪೃಶ್ಯವಾಗಿ ಉಳಿಯಲಿಲ್ಲ. ಭಾರತ ಸ್ವಾತಂತ್ರ್ಯ ಹೋರಾಟವು ಅಸಂಖ್ಯಾತ ತ್ಯಾಗ ಮತ್ತು ಅಂತ್ಯವಿಲ್ಲದ ತಪಸ್ಸಿನ ಶಕ್ತಿಯ ಕಥೆಯಾಗಿದೆ. ಸತ್ಯಾಗ್ರಹದಿಂದ ಸಶಸ್ತ್ರ ಹೋರಾಟದವರೆಗೆ ಎಲ್ಲಾ ಭಾಗಗಳು ಸ್ವಾತಂತ್ರ್ಯದ ಗಮ್ಯ ಸ್ಥಾನವನ್ನು ತಲುಪುತ್ತವೆ. ಸಂತರು, ಸನ್ಯಾಸಿಗಳು, ಕೃಷಿಕರು, ಚಿಕ್ಕ ವಯಸ್ಸಿನ ಮಕ್ಕಳು, ಎಲ್ಲಾ ವರ್ಗದ ಸಮಾಜ ಸುಧಾರಕರು, ಕಲಾವಿದರು, ಶಿಕ್ಷಣ ಚಿಂತಕರು, ಸಾಹಿತಿಗಳು, ಪತ್ರಕರ್ತರು, ಮಹಿಳೆಯರು, ವಿಜ್ಞಾನಿಗಳು ಯಾರೂ ಹಿಂದೆ ಉಳಿಯಲಿಲ್ಲ. ಭಾರತೀಯರು ಸ್ವಾತಂತ್ರ್ಯ ಚಳುವಳಿಯ ಜ್ಯೋತಿಯನ್ನು ಭಾರತದ ಮಣ್ಣಿನಿಂದ ಮಾತ್ರವಲ್ಲದೇ ವಿದೇಶಗಳಿಂದಲೂ ಬೆಳಗಿಸಿದರು. ಜನರು ಜೈಲು/ನೇಣು/ ಚಿತ್ರಹಿಂಸೆಯನ್ನು ಅನುಭವಿಸದ ಪ್ರದೇಶವಿಲ್ಲ.
- ಸ್ವಾತಂತ್ರ್ಯ ಹೋರಾಟದ ಹಲವು ಕ್ಷಣಗಳು ಮತ್ತು ವ್ಯಕ್ತಿಗಳು ಅವರು ದೇಶದ ಮುಂದೆ ಯಾವ ರೂಪದಲ್ಲಿ ಬರಬೇಕಾಗಿತ್ತೋ ಆ ರೂಪದಲ್ಲಿ ಬಂದಿಲ್ಲ.
- ವಸಾಹತುಶಾಹಿಯು ಕೇವಲ ಆರ್ಥಿಕ ಶೋಷಣೆಯಿಂದ ನಿರೂಪಿಸಲ್ಪಟ್ಟಿರಲಿಲ್ಲ. ಆದರೆ ಅದರ ಕೇಂದ್ರದಲ್ಲಿ ಬೌದ್ಧಿಕ ಮತ್ತು ಸಾಂಸ್ಕೃತಿಕ ಕಥೆಗಳನ್ನು ಸಹ ಹೊಂದಿದೆ, ಅದು ಇಂದಿಗೂ ಗೋಚರಿಸುತ್ತದೆ. ಭಾರತಕ್ಕೆ ಬದಲಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜಗತ್ತಿನಲ್ಲಿ ಇಂಡಿಯಾವನ್ನು ಸ್ಥಾಪಿಸುವ ವ್ಯವಸ್ಥಿತ ಪ್ರಯತ್ನ ನಡೆದಿದೆ.
- ಕೆಲವು ತಪ್ಪು ತಿಳುವಳಿಕೆಗಳನ್ನು ಸ್ವಾತಂತ್ರ್ಯದ ಹೋರಾಟದ ಪ್ರಚಲಿತ ಇತಿಹಾಸದಲ್ಲಿ ಸೇರಿಸಲಾಗಿದೆ. ಅವು ಯಾವುವೆಂದರೆ–
  • ಭಾರತ ಎಂದಿಗೂ ರಾಷ್ಟ್ರವಾಗಿರಲಿಲ್ಲ, ಭಾರತವನ್ನು ಒಂದುಗೂಡಿಸುವ ಏಕೈಕ ಸಂಸ್ಕೃತಿ ಇಲ್ಲ. • ಭಾರತವು ಬ್ರಿಟಿಷರಿಂದ ಸುಸಂಸ್ಕೃತವಾಗಿತ್ತು. • ಭಾರತಕ್ಕೆ ಬ್ರಿಟಿಷರು ವಿಜ್ಞಾನವನ್ನು ನೀಡಿದರು. • ಆರ್ಯರು ಮೂಲನಿವಾಸಿಗಳಲ್ಲ, ಅವರು ಹೊರಗಿನಿಂದ ಬಂದವರು. • ಸ್ವಾತಂತ್ರ್ಯವನ್ನು ಕೇವಲ ಒಂದು ಮಾರ್ಗದಿಂದ ಸಾಧಿಸಲಾಯಿತು. ಬ್ರಿಟಿಷರು ನಮ್ಮೊಂದಿಗೆ ಸೇರಿದರು ಇನ್ನೂ ಅನೇಕ.. ಹೀಗೆ ಇತಿಹಾಸದಲ್ಲಿ ನಿಜವನ್ನು ಮುಚ್ಚಿಡಲಾಗಿದೆ.
- ಭಾರತೀಯ ರಾಷ್ಟ್ರದ ಪರಿಕಲ್ಪನೆಯು ರಾಷ್ಟ್ರ ರಾಜ್ಯದ ಪರಿಕಲ್ಪನೆಗೆ ವಿರುದ್ಧವಾಗಿ ಸಂಸ್ಕೃತಿಯನ್ನು ಆಧರಿಸಿದೆ.
- ಭಾರತವು ತನ್ನ ಜ್ಞಾನದ ಶಕ್ತಿಯಿಂದ ವಿಶ್ವಗುರುವಾಗಿತ್ತು. ಮತ್ತು 17ನೇ ಶತಮಾನದವರೆಗೆ ಭಾರತದ ಜಿಡಿಪಿಯು ವಿಶ್ವದ ಮೂರರಷ್ಟಿತ್ತು.
- ಭಾರತದಲ್ಲಿ ಶಿಕ್ಷಣದ ಸುಂದರವಾದ ಮರವಿತ್ತು, ಅದನ್ನು ಬ್ರಿಟಿಷರು ನಾಶಪಡಿಸಿದರು.
- ಭಾರತವು ಅದ್ಭುತವಾದ ವೈಜ್ಞಾನಿಕ ಭೂತಕಾಲವನ್ನು ಹೊಂದಿತ್ತು. ಸ್ವಾತಂತ್ರ್ಯವು ಇವೆಲ್ಲದರ ಒಟ್ಟುಗೂಡಿಸಿದ ಪ್ರತಿಫಲವಾಗಿದೆ. ಪ್ರತಿಯೊಂದು ಧರ್ಮ, ಪ್ರದೇಶ, ಜಾತಿ ವರ್ಗವು ಸ್ವಾತಂತ್ರ್ಯಕ್ಕಾಗಿ ಮಾಡಿದ ಪ್ರಯತ್ನಗಳು ದಂಗೆಯ ಪಿತೂರಿಗಾಗಿ ಅಲ್ಲ, ನಮ್ಮ ಸ್ವಾತಂತ್ರ್ಯ ಚಳುವಳಿಯ ರಾಷ್ಟ್ರವ್ಯಾಪಿ ಪ್ರಯತ್ನಗಳು. ಭಾರತೀಯರು ತಮ್ಮ ಜೀವನ ವಿಧಾನಕ್ಕಾಗಿ, ಜೀವನ ತತ್ವಕ್ಕಾಗಿ ಮತ್ತು ತಮ್ಮ ಸ್ವ ಗುರುತಿಗಾಗಿ ಹೋರಾಡಿದರು.
- ಆದರೆ ದುರಾದೃಷ್ಟವಶಾತ್ ಕೆಲವು ಕೆಲವು ಜನರಿಂದ ಸ್ವ ತಂತ್ರದ ಹೋರಾಟವು ಅಧಿಕಾರದ ಹಸ್ತಾಂತರವಾಯಿತು. ಅಧಿಕಾರ ಹಸ್ತಾಂತರವು ಶಾಂತಿಯುತವಾಗಿ ನಡೆಯಲ್ಲಿಲ್ಲ. 200 ಕೋಟಿ ಜನರು ಭಾರತದ ಇಬ್ಭಾಗದಿಂದ ಬೇರೆ ದೇಶಕ್ಕೆ ಹೋಗಬೇಕಾಗಿ ಬಂದಿತು. 20 ಲಕ್ಷಕ್ಕಿಂತ ಹೆಚ್ಚು ಭಾರತೀಯರು ಕೊಲ್ಲಲ್ಪಟ್ಟರು. ಅಖಂಡ ಭಾರತ ಮತ್ತು ಪೂರ್ಣ ಸ್ವರಾಜ್ಯದ ಕನಸು ಕನಸಾಗಿಯೇ ಉಳಿಯಿತು.
- ಸ್ವರಾಜ್ಯವೇನೋ ದೊರಕಿತು ಆದರೆ ಸ್ವ ತಂತ್ರ ಕನಸಾಗಿಯೇ ಉಳಿಯಿತು. ಶಿಕ್ಷಣ, ರಾಜ್ಯ ನ್ಯಾಯಾಂಗ, ಆರ್ಥಿಕತೆ ಇಂಡಿಯಾದವುಗಳೇ ಆಗಿ ಉಳಿದವೇ ಹೊರತು ಮೂಲ ಭಾರತದವುಗಳು ಆಗಲೇ ಇಲ್ಲ. ಭಾರತದ ಸ್ವಾತಂತ್ರ್ಯ ನಂತರ ವಿದೇಶಿ ಪ್ರಭಾವು ಭಾರತದ ರಾಜಕೀಯ, ಸಾಮಾಜಿಕ ಮತ್ತು ತತ್ವಶಾಸ್ತ್ರಗಳನ್ನು ಭಾರತೀಯತೆಯಿಂದ ದೂರಮಾಡಿದರು. ವೇದ, ಉಪನಿಷದ್, ಗೀತೆ, ರಾಮಾಯಣ ಮತ್ತು ಸ್ಮೃತಿಗಳು ಅಧಿಕೃತವೆಂದು ತಿಳಿಯುವ ಬದಲು ಮಿಲ್, ಹೇಗಲ್, ಸ್ಮಿತ್, ಮಾರ್ಕ್ಸ್ ಅಧಿಕೃತವೆಂದು ತಿಳಿಯಲಾರಂಭಿಸಿದರು.
- ಇವೆಲ್ಲದವುಗಳ ಮಧ್ಯದಲ್ಲಿಯೂ ಭಾರತವು ಕಳೆದ 75 ವರ್ಷಗಳಿಂದ ನಮ್ಮ ರಾಷ್ಟ್ರೀಯ ನಿರಂತರ ಪ್ರಯತ್ನಗಳಿಂದ ವಿಶ್ವ ಸನ್ನಿವೇಶದಲ್ಲಿ ನಾವು ಪ್ರಮುಖ ಪಾತ್ರವನ್ನು ವಹಿಸಿದ್ದೇವೆ. ಇಂದು ಭಾರತವು ಅತಿ ಹೆಚ್ಚು ಕೃಷಿಯೋಗ್ಯ ಭೂಮಿಯನ್ನು ಹೊಂದಿರುವ ದೇಶವಾಗಿದೆ. ಅತಿ ಹೆಚ್ಚು ಯುವ ಜನಸಂಖ್ಯೆ ಮತ್ತು ವಿಶ್ವದ ಅತಿ ಹೆಚ್ಚು ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಇರುವಂತಹ ದೇಶವಾಗಿದೆ. ಆರ್ಥಿಕ ತಂತ್ರಜ್ಞಾನದ, ಜ್ಞಾನದ ವಿಷಯದಲ್ಲಿ ಭಾರತವು ವಿಶ್ವದ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತಿದೆ.
- ಸ್ವರಾಜ್ಯದ ನಂತರ ಭಾರತವು ಧನಾತ್ಮಕವಾಗಿ ಮುಂದುವರೆದಿದೆ. ಆದರೆ ನಾವಿನ್ನು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಕನಸನ್ನು ನನಸಾಗಿಸಿಲ್ಲ. ಹಿಂದಿನ ಅನುಭವಗಳು ಮತ್ತು ಪರಂಪರೆಯ ಹೆಮ್ಮೆಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದಾಗ ಮಾತ್ರ ರಾಷ್ಟ್ರದ ಭವಿಷ್ಯವು ಸರಿಯಾಗಿರುತ್ತದೆ. ಭಾರತವು ಶ್ರೀಮಂತ ಇತಿಹಾಸ ಮತ್ತು ಉತ್ಸಾಹಭರಿತ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಪಡಲು ಸಾವಿರಾರು ವರ್ಷಗಳ ವೈಭವದ ಸಂಪ್ರದಾಯವಾಗಿದೆ. ಭಾರತವನ್ನು ಅಮರ ಎಂದು ಗುರುತಿಸುವ ಈ ಅಮೃತ ಮಹೋತ್ಸವವು ರಾಷ್ಟ್ರದಲ್ಲಿ ಭಾರತವನ್ನು ತನ್ನ ಸ್ವಾಭಿಮಾನದಿಂದ ಅಖಂಡವಾಗಿ ವಿಶ್ವದೊಂದಿಗೆ ವಿಕಸನಗೊಳಿಸಲು ಮತ್ತು ಅಗತ್ಯ ಬಿದ್ದರೆ ಜಗತ್ತಿಗೆ ದಾರಿ ತೋರುವ ರಾಷ್ಟ್ರವಾಗಬಲ್ಲದು.
- ಅಮೃತ ಮಹೋತ್ಸವವು ನಮ್ಮ ಅಸ್ಮಿತೆಯ ಹೆಮ್ಮೆಯನ್ನು ತಿಳಿಯುವ ಸಮಯವಾಗಿದೆ. ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಯ ಉನ್ನತಿಗಾಗಿ, ನಮ್ಮದೇ ಆದ ಜಾಗೃತಿಗಾಗಿ ಮತ್ತು ಇಂಡಿಯಾದಿಂದ ಭಾರತದೆಡೆಗೆ ಹೋಗಲು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-07-2022 Date of Posting 20th or 21st of every month Posted at Periodical Rate

# ಅ. ಭಾ. ರಾ. ಶೈ. ಮಹಾಸಂಘ : ರಾಷ್ಟ್ರೀಯ ಕಾರ್ಯಕಾರಿಣಿ – ಅಯೋಧ್ಯೆ



ದಿನಾಂಕ 26.06.22 ಮತ್ತು 27.06.22ರ ಎರಡು ದಿನ ಉತ್ತರಪ್ರದೇಶದ ಅಯೋಧ್ಯೆಯಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಸುಸೂತ್ರವಾಗಿ ನಡೆಯಿತು. 21 ರಾಜ್ಯಗಳಿಂದ ಬಂದ 28 ಸಂಘಟನೆಗಳು ಕಳೆದ ಬಾರಿಯ ರಾಷ್ಟ್ರೀಯ ಕಾರ್ಯಕಾರಿಣಿಯಿಂದ ಜೂನ್‌ವರೆಗೆ ತಮ್ಮ ತಮ್ಮ ರಾಜ್ಯಗಳಲ್ಲಿ ನಡೆಸಿರುವ ಕಾರ್ಯಕ್ರಮಗಳ ವರದಿಯನ್ನು ನೀಡಿದರು.

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಆಗಸ್ಟ್ ಒಂದನೇ ತಾರೀಖು ಇಡೀ ರಾಷ್ಟ್ರಾದ್ಯಂತ ನಡೆಯುವ ಭಾರತ ಮಾತಾ ಪೂಜನ ಕಾರ್ಯಕ್ರಮದ ಬಗ್ಗೆ ಪೂರ್ಣ ವಿವರಣೆ ನೀಡಿದರು. ಒಂದು ಲಕ್ಷ ಶಾಲೆಗಳನ್ನು ಈ ಕಾರ್ಯಕ್ರಮದ ನಿಮಿತ್ತ ತಲುಪುವ ಗುರಿಯನ್ನು ಎಲ್ಲಾ ಸಂಘಟನೆಗಳು ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಇದುವರೆಗೂ ರಾಜ್ಯ ಸಂಘಟನೆಗಳು ಕಾರ್ಯಕ್ರಮದ ನಿಮಿತ್ತ ಮಾಡಿರುವ ತಯಾರಿಯ ಬಗ್ಗೆ ವರದಿ ಪಡೆಯಲಾಯಿತು.

ನವೆಂಬರ್ 11, 12, 13ರಂದು ಬೆಂಗಳೂರಿನಲ್ಲಿ ನಡೆಯಲಿರುವ ಅಖಿಲ ಭಾರತೀಯ ಅಧಿವೇಶನದ ಸ್ಥಳದ ಬಗ್ಗೆ ಹಾಗೂ ಅಧಿವೇಶನದ ವೇಳಾಪಟ್ಟಿಯ ಬಗ್ಗೆ ಸಂಘದ ಸಂಘಟನಾ ಮಂತ್ರಿಯಾಗಿರುವ ಶ್ರೀ ಮಹೇಂದ್ರ ಕಪೂರ್‌ಜೀಯವರು ಸಭೆಗೆ ಮಾಹಿತಿ ನೀಡಿದರು. ಅಧಿವೇಶನದ ಸಂದರ್ಭದಲ್ಲಿ ಶಿಕ್ಷಕ ಸಮ್ಮಾನ ಕಾರ್ಯಕ್ರಮವೂ ನಡೆಯಲಿದ್ದು, ಶಿಕ್ಷಕ ಸಮ್ಮಾನ ಪಡೆಯಲು ಅರ್ಹರಾಗಿರುವ ಶಿಕ್ಷಕರ ಹೆಸರನ್ನು ಜುಲೈ 15 ರ ಒಳಗೆ ಕೇಂದ್ರಕ್ಕೆ ಕಳುಹಿಸಲು ತಿಳಿಸಲಾಯಿತು.

ಕಾರ್ಯಕಾರಿಣಿಯಲ್ಲಿ ಸಂವರ್ಗಶಃ ಬೈಠಕ್‌ಗಳನ್ನು ನಡೆಸಲಾಯಿತು. ಸಭೆಯಲ್ಲಿ ವಿದ್ಯಾಲಯ, ಉಚ್ಚ ಶಿಕ್ಷಣವರ್ಗಗಳಲ್ಲಿ ಆಯಾ ರಾಜ್ಯಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಸಭೆಯ ನಂತರ ಕೇಂದ್ರಕ್ಕೆ ಆಯಾ ಸಮಸ್ಯೆಗಳ ಬೇಡಿಕೆಗಳನ್ನು ನೀಡಲು ತೀರ್ಮಾನಿಸಲಾಯಿತು.

ದಿನಾಂಕ 27ರಂದು ಅಖಿಲ ಭಾರತೀಯ ಶೈಕ್ಷಿಕ ಮಹಾಸಂಘದ ನೊಂದಣಿಯನ್ನು ಪಡೆಯಲು ಮೂರು ಸಂಘಟನೆಗಳು ಆವೇದನೆಯನ್ನು ನೀಡಿದ್ದವು. 1. ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯ ಶೈಕ್ಷಿಕ ಸಂಘ, ಶಿಮ್ಲಾ 2. ಡಾ॥ ಪಂಜಾಬ್ ರಾವ್ ದೇಶಮುಖ ಕೃಷಿ ವಿದ್ಯಾಪೀಠ ಶೈಕ್ಷಿಕ ಸಂಘ, ಅಕೋಲಾ(ಮಹಾರಾಷ್ಟ್ರ) 3. ಗುಜರಾತ್ ರಾಜ್ಯ ಮಹಾವಿದ್ಯಾಲಯ ಶೈಕ್ಷಿಕ ಸಂಘ. ಸಭೆಯಲ್ಲಿ ಹಾಜರಿದ್ದ ಎಲ್ಲಾ ಪ್ರಮುಖರು ಆವೇದನೆಯನ್ನು ಸ್ವೀಕಾರ ಮಾಡಿ ಸಂಘಟನೆಗಳನ್ನು ನೊಂದಾಯಿಸಿಕೊಂಡರು.

ಅಯೋಧ್ಯೆಯಲ್ಲಿ ಶ್ರೀರಾಮರ ದರ್ಶನವನ್ನು ಭಾಗವಹಿಸಿದ ಎಲ್ಲಾ ರಾಜ್ಯದವರಿಗೂ ಸಂಘಟನೆಯ ವತಿಯಿಂದ ಮಾಡಿಸಲಾಯಿತು. ರಾಜ್ಯದಿಂದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಹ ಸಂಘಟನಾ ಮಂತ್ರಿಗಳಾದ ಶ್ರೀ ಲಕ್ಷ್ಮಣ್‌ಜೀ, ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರಾದ ಶ್ರೀ ಬಾಲಕೃಷ್ಣಭಟ್‌ಜಿ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾಜೀ, ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ಜೀ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ಜೀ ಹಾಗೂ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗಂಗಾಧರಾಚಾರಿಜೀ ಭಾಗವಹಿಸಿದ್ದರು.

ಎರಡು ದಿನ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ 21 ರಾಜ್ಯಗಳಿಂದ ಒಟ್ಟು 98 ಪ್ರಮುಖರು ಭಾಗವಹಿಸಿದ್ದರು.



ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಬಿ.ಸಿ. ನಾಗೇಶ್ ಅವರೊಂದಿಗೆ ಶಿಕ್ಷಕ ಸಂಘದ ಪ್ರಮುಖರಿಂದ ಚರ್ಚೆ



ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ನಡೆದ ಗುರುವಂದನಾ ಕಾರ್ಯಕ್ರಮ



ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ನಡೆದ ಶಿಕ್ಷಕ ಸ್ನೇಹ ಸಮ್ಮಿಲನ ಕಾರ್ಯಕ್ರಮ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com